# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVII - 7-8 ಜುಲಾಯಿ-ಆಗಸ್ಟ್ 1999

ಈ ಸಂಚಿಕೆಯಲ್ಲಿ


| | | |
|---|---|---|
| (ಹರಿ)ದಾಸ ಸಾಹಿತ್ಯ -9 | ● ರಮಾ ಕೃಷ್ಣ | 2 |
| ಅಸೋಸಿಯೇಶನ್ನಿನಲ್ಲಿ ಸ್ವಾತಂತ್ರ್ಯೋತ್ಸವ | | 3 |
| ಗಿರೀಶ ಕಾಸರವಳ್ಳಿಯವರ ಚಿತ್ರೋತ್ಸವ | ● ರಮಾ ಕೃಷ್ಣ | 7 |
| ಸಂದರ್ಶನ : ಗಿರೀಶ ಕಾಸರವಳ್ಳಿ | ● ಪ್ರಸಾದ್, ಮಂಜುನಾಥಯ್ಯ | 10 |
| ಕಾರ್ಗಿಲ್ ನಿಧಿ ಸಮರ್ಪಣಾ ಕಾರ್ಯಕ್ರಮ | | 12 |
| ಸುತ್ತ-ಮುತ್ತ | | 14 |
| Forth Coming events | | 16 |


The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 ● Grams: "KARUNADU"

# ಹರಿದಾಸ ಸಾಹಿತ್ಯ ಭಾಗ - 9

● ರಮಾಕೃಷ್ಣ

## ಮಹೀಪತಿ ರಾಯರು (ದಾಸರು)

ಹರಿದಾಸ ಸಾಹಿತ್ಯವನ್ನು ಅಭ್ಯಾಸದ ದೃಷ್ಟಿಯಿಂದ ನರಹರಿ ತೀರ್ಥರಿಂದ ಕನಕದಾಸರವರೆಗೆ ಒಂದು ಘಟ್ಟವೆಂದೂ, ಎರಡನೆಯ ಘಟ್ಟ, ಮಹೀಪತಿ ದಾಸರಿಂದ ಆರಂಭವಾಯಿತೆಂದು ಇತ್ತೀಚಿನ ಸಂಶೋಧನೆಯಿಂದ ತಿಳಿದು ಬಂದಿದೆ. ಈ ದ್ವಿತೀಯ ಪಟ್ಟದಲ್ಲಿ ಮಹೀಪತಿದಾಸರಿಂದ ಹಿಡಿದು ವಿಜಯದಾಸರವರೆಗೆ ಅನೇಕ ಹರಿದಾಸರು ಕೀರ್ತನೆ ರಚಿಸಿದ್ದಾರೆ. ಮಹೀಪತಿರಾಯರ ಕಾಲವನ್ನು ಹರಿದಾಸ ಸಾಹಿತ್ಯದಲ್ಲೇ ಸಂದಿಗ್ಧ ಕಾಲವೆನ್ನಲಾಗಿದೆ. ಪುರಂದರದಾಸರ ಕಾಲ ಮುಗಿದಿತ್ತು. ವಿಜಯದಾಸರ ಕಾಲವಿನ್ನೂ ಪ್ರಾರಂಭವಾಗಿರಲಿಲ್ಲ. ಅಂದರೆ ಕ್ರಿ.ಶ. 1564ರಿಂದ 1687ರ ವರೆಗೆ ಹರಿದಾಸ ಸಾಹಿತ್ಯದಲ್ಲಿ ಕೃಷಿ ನಡೆಯಿತೆಂದು ತಿಳಿದಿರಲಿಲ್ಲ. ಇತ್ತೀಚಿನ ಸಂಶೋಧನೆಯಿಂದ ಈ ಕಾಲದಲ್ಲಿ ಮಹೀಪತಿರಾಯರು ಮತ್ತವರ ಮಕ್ಕಳುಗಳು ವಿಪುಲವಾಗಿ ಪದಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ಶ್ರೀಮಂತ ಗೊಳಿಸಿದ್ದಾರೆಂದು ತಿಳಿದು ಬಂದಿದೆ. ಅಂದರೆ ಈ ಕಾಲ ತಟಸ್ಥ ಅವಧಿ ಅಲ್ಲ.

ಮಹೀಪತಿರಾಯರ ಜನನ 1610ರಲ್ಲಿ ಆಗಿದೆ. ಇವರು ದೈವಾಧೀನರಾದುದು 1681 ಎಂದೂ, ಕೆಲವರು 1708ರಲ್ಲಿ ಎನ್ನುವವರೂ ಇದ್ದಾರೆ. ಒಟ್ಟಿನಲ್ಲಿ ಇವರು 17ನೇ ಶತಮಾನದಲ್ಲಿ ಇದ್ದವರು ಹಾಗೂ ವಿಜಯದಾಸರಿಗೆ ಮುಂಚಿನವರು. ಇವರು ಆದಿಲ್‌ಶಾಹೀ ಸುಲ್ತಾನರಲ್ಲಿ ದಿವಾನರಾಗಿದ್ದವರು. ಬಿಜಾಪುರದಲ್ಲೇ ಇದ್ದ ಇಬ್ಬರು ಸೂಫೀಸಂತರಾದ ನಂಗ ನಂಗಿ ಎಂಬ ಹೆಸರಿನ ಅಣ್ಣ ತಂಗಿಯರುಗಳಿಂದ ಇವರಿಗೆ ಜ್ಞಾನೋದಯವಾಯಿತೆಂದು ಇವರ ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ.

ಶಹಾನಂಗ ಒಮ್ಮೆ ಇವರ ಮುದ್ರೆ ಉಂಗುರ (ದಿವಾನರ)ವನ್ನು ನೀರೆಗೆಸೆದ ಇವರು ಗಾಭರಿಯಾದರು. ಆಗ ಆ ಸಂತ ಹತ್ತಾರು ಒಂದೇ ತರಹದ ಉಂಗುರಗಳನ್ನು ನೀರಿನಿಂದ ತೆಗೆದು 'ನಿನ್ನದಾವುದೋ ತೆಗೆದುಕೋ' ಎಂದಾಗ ಇವರ ಮುದ್ರೆ ಉಂಗುರ ಗುರುತಿಸಲಾಗಲಿಲ್ಲ. ಆಗ ಶಹಾನಂಗನೇ ಇವರಿಗೆ ತೆಗೆದು ಕೊಟ್ಟು ಬಾಕಿ ಎಲ್ಲಾ ಉಂಗುರಗಳನ್ನು ಮತ್ತೆ ನೀರಿಗೆ ಎಸೆದು 'ಈ ಕಲ್ಲು ಹರಳುಗಳಿಗೆ ಒದ್ದಾಡು ವೆಯಾ? ಆ ಪರಮಾತ್ಮನನ್ನು ಕಾಣಲು ಪ್ರಯತ್ನಿಸು' ಎಂದನಂತೆ. ಹಾಗೂ ನಿನ್ನ ಗುರುಗಳಾಗಿ ಭಾಸ್ಕರ ಸ್ವಾಮಿಗಳನ್ನು ಆರಿಸಿಕೋ ಎಂದು ಆದೇಶವನ್ನು ಇತ್ತನಂತೆ. ಈ ಘಟನೆಯ ನಂತರ ಮಹೀಪತಿರಾಯರು ತಮ್ಮ ದಿವಾನ ಪದವಿಯನ್ನು ತ್ಯಾಗಮಾಡಿ ಭಾಸ್ಕರ ಸ್ವಾಮಿಗಳಲ್ಲಿ ಹೋಗಿ ಅವರಲ್ಲಿ ಉಪದೇಶ ಪಡೆದರಂತೆ ಮಹೀಪತಿರಾಯರು ಮಧ್ವಮತ. ಸ್ಥರಾದರೂ ಮಧ್ವಸಿದ್ಧಾಂತಗಳ ಬಗ್ಗೆಯಾಗಲೀ ಇಲ್ಲ ಹರಿಸರ್ವೋತಮತ್ವವನ್ನು ಸಾರಲಾಗಲೀ ತಮ್ಮ ರಚನೆಗಳನ್ನು ಮಾಡಿಲ್ಲ. ಇವರು ಸ್ವತಃ ಯೋಗಿಗಳು. ಯೋಗವಿಚಾರ ಕುರಿತಂತೆ ಹಾಗೂ ಶುದ್ಧ ಭಕ್ತಿಯುತವಾದ ಸರಳ ಶೈಲಿಯಲ್ಲಿ ಇವರ ರಚನೆಗಳಿವೆ. ಇತರದಾಸರುಗಳ ಪ್ರಭಾವ ಇವರ ಮೇಲಾಗಿದೆ. ಇವರು ಯಾರಿಂದಲೂ ದಾಸದೀಕ್ಷೆ ಪಡೆದಂತೆ ಕಂಡುಬರುವುದಿಲ್ಲ. ಇವರದ್ದೇ ಒಂದು ವಿಶಿಷ್ಟ ರೀತಿಯಾಗಿದೆ.

ಈ ಸೂಚನೆಯನ್ನು ಗಮನಿಸಿ. ರಾಗ ಭೀಮ್ ಪಲಾಸ್

ಶೋಧಿಸಿ ನೋಡಿರೋ. ಸದಾ ಭೋದದ ನಿಜ ಭೋದ
ಶೋಧಿಸಿ ನೋಡಿ ಸದ್ಗುರು ಕೃಪೆಯಿಂದ। ಸಾಧನಕಿದು ಬಲು ಆನಂದ।
ಭೇದಿಸಿ ನೋಡುವುದಿದೆ ತನ್ನಿಂದ। ಆದಿ ಅನಾದಿ ಸಹಜಾನಂದ
ತಂತ ನಿಡಿದು ಅದರಂತೆ ತಾನೋಡಿ। ಎಂತೆಂತಿಹ ನಿಜ ಅಂತೇ ನೋಡಿ।
ಅಂತರಾತ್ಮದಿ ಅನುಭವ ಬೆರೆದಾಡಿ ಸಂತಸದಮಲ ಸುಖ ಸೂರ್‍ಯಾಡಿ।
॥ ಚ ॥ ವಿಹಿತಕೆ ವಿಹಿತವಾಗುವ ಸುಪಥ ದ್ವೈತಾದ್ವೈತಕಿದೆ ರಹಿತ।
ಮಹ ಮಹಿಮರ ಆನಂದ ಭರಿತ, ಮಹೀಪತಿ ಮನೋನ್ಮನದ ಸುವಸ್ತ॥

ಇವರ ಭಕ್ತಿಯುತವಾದ ಈ ರಚನೆ ಗಮನಿಸಿ.

"ಹುಟ್ಟಿ ಬಂದಿಹುದೇ ವಿಠ್ಠಲನ ಸುಸೇವೆಗೆನ್ನಿ।
ಸೃಷ್ಟಿಯೊಳಿಹುದೇ ಶ್ರೀ ವಿಷ್ಣು ಸಹವಾಸವೆನ್ನಿ।

ಇದರಲ್ಲಿ ಮಾನವ ಜನ್ಮದ ಸಾರ್ಥಕತೆ ಹಾಗೂ ಗುರಿ ವಿಠ್ಠಲನ ಸೇವೆ ಎಂದು ನಂಬಿದರು.

ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ಹರಿಸರ್ವೋತ್ತಮತ್ವವನ್ನು ನಂಬಿ ಆನಂಬಿಕೆಯ ಮೂಲಕವೇ ತಮ್ಮ ಆಧ್ಯಾತ್ಮಿಕ ಬಲ ಬೆಳೆಸಿಕೊಂಡವರು ಇವರು ಎನ್ನುವುದಕ್ಕೆ ಈ ಕೃತಿ ಸಾಕ್ಷಿ.

`ಹರಿರೇವ ಪರೋ ಹರಿರೇವ ಗುರೋ
ಹರಿರೇವ ಗುರು ವೆಂದರ ಘ್ನರೋ.
ಗುರು ಮಧ್ವಪರ್‍ನ್ವೇಳಿದ ನಿಜಕೀಲು
ಅರಿತು ಕೊಂಬುದಿದೆ ಮೊದಲು
ಪರಮ ಭಾಗವತನುಭವದ ಬಾಗಿಲು
ಪರಗತಿ ಸಾಧನಕಿದೆ ಮಿಗಿಲು (ಮಹೀಪತಿರಾಯರ ಕೃತಿಗಳು ಪುಟ 430) ಈ ಕೆಳಕಂಡ ಕೃತಿಯಲ್ಲಿ ಹರಿಭಕ್ತರ ಸಹವಾಸದಿಂದಾಗುವ ಪ್ರಯೋಜನ ಹೇಳಿದ್ದಾರೆ.

ಹರಿಭಕ್ತರ ಸಂಗ ಸ್ನಾನ ಗಂಗ ತುಂಗ
ಹರಿಮಹಿಮರ ಅಂಗ ಅಂತರಂಗ
ಹರಿಪರಮಾನಂದ ಗುರು ಕರುಣಾ ಕೃಪಾಂಗ
ತರಳ ಮಹಿಪತಿ ಭಯಭಯವು ಭಂಗ
(ಮಹೀಪತಿರಾಯರ ಕೃತಿಗಳು) (ಕೀರ್ತನೆ 63)

ಪರಮ ತ್ಯಾಗಿಗಳೆಂದು ಪ್ರಖ್ಯಾತರಾಗಿರುವ ಮಹೀಪತಿರಾಯರು. ಜನ ಸಾಮಾನ್ಯರಿಗೆ ಪರಮಾರ್ಥ ಬೋಧಿಸುವುದು ತನ್ನ ಕರ್ತವ್ಯವೆಂದು ತಿಳಿದರಲ್ಲದೆ, ಅದನ್ನೆ ತಮ್ಮ ಜೀವನದ ಗುರಿಯಾಗಿಸಿಕೊಂಡರು. ಇವರು ಶ್ರೀ ಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು, ಕೊರವಂಜಿಪದ, ಕೋಲುಪದ, ಲಾವಣಿ, ಸುಗ್ಗಿ ಪದ ಮುಂತಾದುವನ್ನು ಜಾನಪದ ಮಟ್ಟಿನಲ್ಲಿ ರಚಿಸಿದ್ದಾರೆ. ಇವರ ರಚನೆಗಳಲ್ಲಿ ಷಟ್ಪದಿ, ಸಾಂಗತ್ಯ, ರಗಳೆಗಳೂ ಇವೆ. ಇವರ ಸಾಹಿತ್ಯ ವೈವಿಧ್ಯತೆಯಿಂದ ಕೂಡಿದ ಕುಟ್ಟುವ, ಬೀಸುವ ಪದಗಳು ಜೋಗುಳ ಎಲ್ಲವನ್ನು ಇವರ ರಚನೆಗಳಲ್ಲಿ ಕಾಣಬಹುದು.

( 15 ನುಡಿಗಳಿರುವ ಈ ರಚನೆಯನ್ನು ಗಮನಿಸಿ)

ವಾಸುದೇವ ನಾಶ್ರಯಿಸದ ಉಪಾಸ ವ್ಯಾತಕೆ
ಧ್ಯಾಸ ಬಲಿಯದಿಹ ಮಿಗಿಲಭ್ಯಾಸ ವ್ಯಾತಕೆ
ಹೃದಯ ಶುದ್ಧವಾಗದೆ ಉದಯಸ್ನಾನ ವ್ಯಾತಕೆ
ಬದಿಯಲಿಹ ಸುವಸ್ತು ಕಾಣದ ಜ್ಞಾನವ್ಯಾತಕೆ
ಉದರ ಕವಿಯ ಶಾಂತಿ ಹೊಂದದ ಸಾಧನ ವ್ಯಾತಕೆ.
ಬುಧರ ಸೇವೆ ಗೊದಗದ ಸ್ವಧನ ವ್ಯಾತಕೆ
ಎಂದು ಹೇಳಿ ಕೊನೆಗೆ
ಮನ ಸ್ಥಿರಗೊಳ್ಳದವನ ಶ್ರವಣವೇತಕೆ
ನೆನವು ನೆಲೆಗೊಳ್ಳದಿದ್ದರೆ ಮನನ ವೇತಕೆ
ತನುವಿನಲಿ ಘನವ ಕಾಣದೆ ಅನುಭವ ವ್ಯಾತಕೆ
ದಾನಿ ಮಹೀಪತಿಸ್ವಾಮಿಯ ಕಾಣದ ಜನ್ಮವೇತಕೆ

ಎಂದು ಹಾಡಿದ್ದಾರೆ. ರಾಯರು ರಚಿಸಿರುವ ನೂರಾರು ದೇವರು ನಾಮ ಅವರ ವಂಶೀಕರ ವಶದಲ್ಲಿ ಇಂದಿಗೂ ಕಾಖಂಡಿಯಲ್ಲಿದೆ. ಅದನ್ನು ಪರಿಷ್ಕರಿಸಿ ಬೆಳಕಿಗೆ

(ಪುಟ 4ಕ್ಕೆ)

# ಅಸೋಸಿಯೇಷನ್ನಿನಲ್ಲಿ ಸ್ವಾತಂತ್ರೋತ್ಸವ



***N.K.E.S. High School Students presenting a skit at Mysore Association August 15, the Independence Day.***

ತಾ. 15-8-99ರ ಸಂಜೆ ಅಸೋಸಿಯೇಷನ್ನಿನ ಸದಸ್ಯರೆಲ್ಲಾ ಸೇರಿ ಅಸೋಸಿಯೇಷನ್ನಿನ ಪ್ರಾಂಗಣದಲ್ಲಿ ಸ್ವಾತಂತ್ರೋತ್ಸವವನ್ನು ಆಚರಿಸಿದರು. ಅಂದಿನ ಕಾರ್ಯಕ್ರಮವನ್ನು ಪ್ರಮುಖವಾಗಿ ಮಕ್ಕಳೇ ನಡೆಸಿಕೊಟ್ಟರು. ಮೇಘ ಕಾರ್ಯಕ್ರಮ ಸಂಚಾಲಕಿಯಾಗಿ ಕೆಲಸ ಮಾಡಿದಳು. ಪ್ರಿಯಂಕಳಿಂದ ಕಾರ್ಯಕ್ರಮ ಗಣಪತಿ ಸ್ತುತಿಯೊಂದಿಗೆ ಪ್ರಾರಂಭವಾಯ್ತು.

ಕುಮಾರಿಯರಾದ ಪದ್ಮ, ಪ್ರಿಯಾಂಕ, ಪೂರ್ಣಿಮಾ ಇವರುಗಳು ಚಿತ್ರಗೀತೆಗಳನ್ನು ಹಾಡಿದರು. ಹಾಗೂ ದೇಶಭಕ್ತಿ ಗೀತೆಗಳನ್ನೂ ಹಾಡಿದರು. ಅಭಿಜಿತ್, ಶ್ರೀಧರ, ಅರ್ಜುನ್ ಇವರುಗಳು, ಚಿತ್ರಗೀತೆ ಹಾಗೂ ದೇಶಭಕ್ತಿ ಗೀತೆಗಳನ್ನು ಹಾಡಿ ಅಂದಿನ ಕಾರ್ಯಕ್ರಮ ನಡೆಸಿಕೊಟ್ಟರು. ಕೆಲವರು ಹಾಡಿದ ವೀರ ಗೀತೆಗಳು ಬಹಳ ಸ್ಫೂರ್ತಿದಾಯಕವಾಗಿದ್ದಿತು.

ಶ್ರೀ ಗಿರೀಶ್ ಜೋಶಿಯವರು, ತಬಲ ಹಾಗೂ ರಾಘವೇಂದ್ರ ಬಾಳಗಾರವರು ಕ್ಯಾಸಿಯೋ ನುಡಿಸಿ ಮಕ್ಕಳಿಗೆ ಪಕ್ಕವಾದ್ಯವನ್ನೊದಗಿಸಿದರು. ಕೊನೆಯದಾಗಿ N.K.E.S.ಶಾಲೆಯ ಮಕ್ಕಳು ಅಧ್ಯಾಪಕರುಗಳ ಹಿನ್ನೆಲೆಯ ಗಾಯನ ಮತ್ತು ನಿರೂಪಣೆಯ ಮೂಲಕ ಒಂದು ರೂಪಕವನ್ನು ಸಾದರ ಪಡಿಸಿದರು.

ಈ ರೂಪಕ ಪ್ರಸ್ತುತ ಭಾರತೀಯ ಮನೋಭಾವಕ್ಕೆ ಕನ್ನಡಿ ಹಿಡಿದಂತಿತ್ತು. ಧರ್ಮದ ಹೆಸರಿನಲ್ಲಿ ಮಾನವೀಯತೆಯನ್ನೇ ಮರೆಯುವ, ಹಾಗೂ ಏನೇ ವಿಷಯವಾದರೂ ಅದಕ್ಕೆ ಧರ್ಮದ ಬಣ್ಣ ಬಳಿಯುವುದು ಹಾಗೂ ತಮ್ಮ ಧರ್ಮವೇ ಹೆಚ್ಚು ಎಂಬ ದುರಭಿಮಾನದಿಂದ ಬೀಗುವ ಮನೋಭಾವಕ್ಕೆ ಸವಾಲೆಸೆದಂತಿತ್ತು.

ಕೊನೆಗೆ ಮಾನವೀಯತೆ ಪರಸ್ಪರ ಬಂಧುತ್ವ ಹಾಗೂ ಸಹಕಾರದಲ್ಲಿಯೇ ದೇಶದ, ಸಮಾಜದ ಹಾಗೂ ವ್ಯಕ್ತಿಯ ವಿಕಾಸ ಅಡಗಿದೆ ಎಂದು ತೋರಿಸಲಾಯ್ತು. ನಿಶ್ಚಯವಾಗಿಯೂ, ರೂಪಕ ಹೃದಯ ಸ್ಪರ್ಶಿಯಾಗಿತ್ತು. N.K.E.S. ಶಾಲೆಯ ಅಧ್ಯಾಪಕ ವರ್ಗ ಹಾಗೂ ಮಕ್ಕಳು ಚೆನ್ನಾದ ಕಾರ್ಯಕ್ರಮ ನೀಡಿದರು.

ಕಾರ್ಯಕ್ರಮದ ನಂತರ ಹೌಸಿ. ಆನಂತರ ಎಲ್ಲರಿಗೂ ಊಟದ ಏರ್ಪಾಡು ಇತ್ತು. ಸಾಕಷ್ಟು ಸಂಖ್ಯೆ ಸದಸ್ಯರು ಹಾಜರಿದ್ದು ಕಾರ್ಯಕ್ರಮ ನಡೆಸಿಕೊಟ್ಟರು.

— ರಮಾ ಕೃಷ್ಣ.

**SHREE SWARNA GOWRI & SHREE MAHAGANAPATHY POOJA MAHOTSAVA -1999**

| Day | Date | Timing | Programme |
|---|---|---|---|
| Sunday | 12-09-99 | 10.00 A.M. | Shree Swarna Gowri Pooja |
| Monday | 13-09-99 | 10-00 A.M. | Shree Mahaganapathy Pratistapne |
| Tuesday | 14-09-99 | 7-00 P.M. | Devotional songs by Anuja Mahila Mandal, Dombivli |
| Wednesday | 15-09-99 | 7-00 P.M. | Carnatic recital by Vijyalaxmi Rangarajan & Party |
| Thursday | 16-09-00 | 7-00 P.M. | Devotional songs by Swarn Sadhana Group |
| Friday | 17-09-99 | 6-30 P.M. | Arashina kumkuma for Ladies |
| | | 7-00 P.M. | Carnatic vocal recital by Smt. Vijayalaxmi & Party |
| Saturday | 18-09-99 | 7-00 P.M. | Hindustani classical recital by Smt. Aditi Joshi & Party |
| Sunday | 19-09-99 | 10.00 A.M. | Veda Ghosha by Vaidikas of Sri Shankar Muttam |
| | | 11-00 A.M. | Devotional songs Smt. Susheela Acharya & Party. |


**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES, EAST WEST, MODI LUFT & JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

(ಪುಟ 2ರಿಂದ)

**ಹರಿದಾಸ ಸಾಹಿತ್ಯ ....**

ತರಬೇಕೆಂದು ಕರ್ನಾಟಕ ಭಕ್ತಿ ವಿಜಯದ ರಚಯಿತರಾದ ಬೇಲೂರು ಕೇಶವದಾಸರು ಅಭಿಪ್ರಾಯ ಪಟ್ಟಿದ್ದಾರೆ. ಇವರ ಶಿಷ್ಯರಲ್ಲಿ, ಬ್ರಾಹ್ಮಣರು, ಲಿಂಗಾಯಿತರು, ಮುಸಲ್ಮಾನರು, ಮುಂತಾದ ಎಲ್ಲಾ ಧರ್ಮೀಯರೂ ಇದ್ದರು. ಇವರು ಉರ್ದು, ಪಾರ್ಸಿ, ಕನ್ನಡ ಮತ್ತು ಸಂಸ್ಕೃತದಲ್ಲಿ ಉದ್ದಾಮ ಪಂಡಿತರಾಗಿದ್ದರು.

**ವಿಜಯದಾಸರು**

ವಿಜಯದಾಸರು ತುಂಗಾಭದ್ರಾ ತೀರದ ಚೀಕಲಪರವಿ ಎಂಬ ಗ್ರಾಮದವರು. ಇವರ ಕಾಲವನ್ನು 1687ರಿಂದ 1755ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಇವರ ತಂದೆಯವರ ಹೆಸರು ಶ್ರೀನಿವಾಸಪ್ಪ, ತಾಯಿ ಕೂಸಮ್ಮ ಈ ದಂಪತಿಗಳಿಗೆ ಹುಟ್ಟಿದ ಮಗುವಿಗೆ ದಾಸಪ್ಪನೆಂದು ಹೆಸರಿಟ್ಟರು. ಇವರ ಸಂಸಾರ ಬಹಳ ಬಡತನವನ್ನು ಅನುಭವಿಸುತ್ತಿದ್ದ ಕಾರಣ ದಾಸಪ್ಪನಿಗೆ ವಿದ್ಯಾಭ್ಯಾಸವೂ ಇಲ್ಲವಾಯ್ತು. ಸಮಾಜದಲ್ಲಿ ಹಣ, ವಿದ್ಯೆ ಎರಡೂ ಇಲ್ಲದ ಇವರು ಬಹಳ ನಿಕೃಷ್ಟತೆಗೆ ಒಳಗಾಗಿದ್ದಾರೆ. ಇವರನ್ನು ಜನ ಕೂಸಿಯ ಮಗ ದಾಸನೆಂದು ಕರೆಯುತ್ತಿದ್ದರು. ಇವರು ಹರಿದಾಸರಾದ ಮೇಲೆ ಜನ ಇವರಿಗೆ ಕೊಟ್ಟ ಗೌರವ ಮನ್ನಣೆ ಅಪಾರ. ಇದೆಲ್ಲಾ ಆ ಶ್ರೀ ಹರಿಯ ಕೃಪೆಯಿಂದೇ ನಂಬಿ ಅವನನ್ನು ಹೊಗಳಿ ಹಾಡಿರುವ ಈ ಕೃತಿಯಲ್ಲಿ ಅವರ ಹಿಂದಿನ ಜೀವನದ ಚಿತ್ರಣ ನಮಗೆ ದೊರೆಯುತ್ತದೆ.

'ನಿನ್ನ ಒಲುಮೆ ಯಿಂದ ॥ ಪ ॥
ನಿಖಿಳ ಜನರು ಬಂದು
ಮನ್ನಿಸುವರೋ ಮಹಾರಾಯ,
ಎನ್ನ ಪುಣ್ಯಗಳಿಂದ ಈ ಪರಿಯುಂಟೇನೋ
ನಿನ್ನದೇ ಸಕಲ ಸಂಪತ್ತು ॥ ಅ. ಪಲ್ಲವಿ ॥
ಸಂಜೆ ತನಕ ಇದ್ದು ಸಣ್ಣ ಸೌಟು ತುಂಬಿ
ಗಂಜಿ ಕಾಣದೆ ಬಳಲಿದೆನೋ ಹಿಂದೆ
ವ್ಯಂಜನ ನಾನಾ ಸುಭಕ್ಷ್ಯ ಭೋಜ್ಯಂಗಳ
ಭುಂಜಿಸುವುದು ಮತ್ತೇನೋ ।
ಒಬ್ಬ ಹೆಂಗಸಿಗೆ ಅನ್ನವ ನಿಕ್ಕುವುದಕ್ಕೆ ನಾ
ತಬ್ಬಿಬ್ಬು ಗೊಂಡೆನೋ ಹಿಂದೆ
ನಿರ್ಭರದಿಂದಲಿ ಸರ್ಬರ ಕೂಡಿನ್ನು
ಹಬ್ಬವನುಂಬೆ ಶ್ರೀ ಹರಿಯೇ ॥

ವಿಜಯ ದಾಸರು ದಾಸದೀಕ್ಷೆ ಪಡೆದು ದಾಸರಾದದ್ದೂ ಒಂದು ಸ್ವಾರಸ್ಯ. ಒಮ್ಮೆ ಶ್ರೀಮಂತ ತಹಸೀಲ್ದಾರನ ಮಗನ ಮದುವೆಯ ಅದ್ದೂರಿ ಕಂಡು ಒಂದೆರಡುದಿನವಾದರೂ ತಮ್ಮ ಊಟದ ತೊಂದರೆ ನೀಗಬಹುದೆಂದು ಆ ಮದುವೆಗೆ ಹೋದರು. ಮನೆಜನ ಇಡೀದಿನ ಒಂದಿಲ್ಲೊಂದ ಕೆಲಸಕ್ಕೆ ಹಚ್ಚಿ ಕೆಲಸ ಮಾಡಿಸಿಕೊಂಡರೇ ಹೊರತು ಇವರಿಗೆ ಊಟ ಇಕ್ಕಲಿಲ್ಲ. ಮಲಗಲೂ ಜಾಗ ಕೊಡದೆ ಕೂಸಿಮಗ ದಾಸನೆಂದು ಸಾಕಷ್ಟು ಅಪಮಾನವನ್ನು ಮಾಡಿದರು. ಜಿಗುಪ್ಸೆಗೊಂಡು ಹೊರಟ ದಾಸಪ್ಪನಿಗೆ ಕೇಶವ ರಾಮನೆಂಬ ಒಬ್ಬ ಸದ್ಗಹಸ್ಥನಿಂದ ಅಂದು ಹೊಟ್ಟೆ ತುಂಬಾ ಊಟ ಸಿಕ್ಕಿತು. ತನ್ನನ್ನೇ ಪೋಶಿಸಿ ಕೊಳ್ಳಲಾರದ ನಾನು. ನನ್ನ ಕುಟುಂಬವನ್ನೇನು ಪೋಷಿಸಲಿ? ಎಂದು ಬೇಸರಿಸಿದ ದಾಸಪ್ಪ ಯಾತ್ರಾರ್ಥಿಯಾಗಿ ಊರು ಬೇಸರಿಸಿದ ದಾಸಪ್ಪ ಯಾತ್ರಾರ್ಥಿಯಾಗಿ ಊರು ಬಿಟ್ಟರು ತಿರುಗುತ್ತಾ ತಿರುಗುತ್ತಾ ಇವರು ಕಾಶಿಗೆ ಬಂದು ಒಂದುರಾತ್ರಿ ಮಲಗಿದ್ದಾಗ ಇವರ ಕನಸಿನಲ್ಲಿ ಪುರಂದರದಾಸರು ದರ್ಶನ ಕೊಟ್ಟು ಇವರಿಗೆ ದಾಸದೀಕ್ಷೆಯನ್ನೂ 'ವಿಜಯ ವಿಠ್ಠಲ'ನೆಂಬ ಅಂಕಿತವನ್ನು ದಯಪಾಲಿಸಿದರು. ಇಲ್ಲಿಂದ ಮುಂದೆ ದಾಸಪ್ಪ ಹರಿದಾಸರಾಗಿ ವಿಜಯ ದಾಸರಾದರು. ಇಲ್ಲಿ ವರೆಗೆ ಅವಿದ್ವಾಂತರಾಗಿದ್ದ ಇವರು ಗುರು ಕೃಪೆಯಿಂದಲೂ, ಭಗವತ್ ಕೃಪೆಯಿಂದಲೂ ಅನೇಕಾನೇಕ ದೇವರನಾಮ (ಪದ) ರಚಿಸುವ ಶಕ್ತಿ ಪಡೆದರು. ಪುರಂದರದಾಸರನ್ನು ತಮ್ಮ ಗುರುವಾಗಿ ಸ್ವೀಕರಿಸಿದ ವಿಜಯದಾಸರು ಪುರಂದರ ಸಾಹಿತ್ಯವನ್ನು ಕ್ರೋಢೀಕರಿಸುವ ಕಾರ್ಯಕ್ಕೆ ನಿಂತರು. ವಿಜಯನಗರದ ಅವನತಿಯೊಂದಿಗೆ ದಾಸ ಕೂಟವೂ ಅವನತಿ ಹೊಂದಿತ್ತು. ದಾಸಕೂಟದ ದಾಸರುಗಳು ದಾಸ ಕೂಟದಲ್ಲಿ ಸಂಗ್ರಹಿತವಾಗಿದ್ದ, ಸಾಹಿತ್ಯ ಭಂಡಾರವನ್ನು ಹೊತ್ತು ತಮಗೆ ಸುರಕ್ಷಿತವೆನಿಸಿದ ಸ್ಥಳಗಳಲ್ಲಿ ಹೋಗಿ ಸೇರಿ ಅದನ್ನು ಪೋಷಿಸಿ ಕೊಂಡಿದ್ದರು. ವಿಜಯದಾಸರು ಶ್ರದ್ಧಾ ಭಕ್ತಿಯಿಂದ ಎಲ್ಲಾ ಕಡೆಯೂ ತಿರುಗಿ ಪುರಂದರದಾಸರ ಸಾಹಿತ್ಯವನ್ನು ಪುನರುಜ್ಜೀವನ ಗೊಳಿಸಿದರು.

ನಾಲ್ಕುಲಕ್ಷದ ಎಪ್ಪತ್ತೈದು ಸಾವಿರ ಕೃತಿರಚನೆಯನ್ನು ಪುರಂದರದಾಸರು ರಚಿಸಿದರೆಂದೂ, ಅವರ ಗುರಿ ಐದು ಲಕ್ಷ ಕೃತಿರಚನೆಯಾಗಿತ್ತೆಂದೂ ಮಿಕ್ಕ ಇಪ್ಪತ್ತೈದು ಸಾವಿರ ಕೃತಿಯನ್ನು ವಿಜಯದಾಸರು ರಚನೆ ಮಾಡಿ ಐದು ಲಕ್ಷಕ್ಕೆ ಭರ್ತಿ ಮಾಡಿದರೆಂದು ಒಂದು ಹೇಳಿಕೆ ಇದೆ. ಇವರ ಮುದ್ರಿಕೆ 'ವಿಜಯ ವಿಠ್ಠಲ' ಅತಿಹೆಚ್ಚಾಗಿ ಉಗಾಭೋಗಗಳನ್ನು ರಚಿಸಿರುವವರಲ್ಲಿ ವಿಜಯದಾಸರು ಪ್ರಮುಖರು. ವಿಜಯದಾಸರು ಹರಿದಾಸರಾದ ಮೇಲೆ ತಮ್ಮ ಊರಾನ ಚೀಕಲಪರವಿಗೆ ಬಂದು ಸಂಸಾರಸ್ಥ ರಾಗಿದ್ದರು. ಇವರಿಗೆ ಇಬ್ಬರು ಮಕ್ಕಳಾದರು.

ಇವರ ಶಿಷ್ಯರಲ್ಲಿ ಸುಬ್ಬಣ್ಣಾಚಾರ್ಯ ರೆಂಬುವವರೂ ಒಬ್ಬರು. ಇವರು ಸುಧಾಪಾಠಕರಾಗಿದ್ದರು. ವಿಜಯದಾಸರು ಶಾಸ್ತ್ರಾಧ್ಯಯನ ಮಾಡಿದ ವಿದ್ವಾಂತರಲ್ಲವೆಂದು ಇವರನ್ನು ತಾತ್ಸಾರವಾಗಿ ಕಂಡರು. ದೈವಾನುಗ್ರಹಿಗಳಾದ ವಿಜಯದಾಸರು ಏನೂ ಅರಿಯದ ಶುಂಠನಿಗೆ ಅನುಗ್ರಹಮಾಡಿ ಅವನಿಂದ ಸುಧಾಪಾಠ ಮಾಡಿಸಿದರಂತೆ. ಇವರ ಮಹಿಮೆ ಮರಿತು ಸುಬ್ಬಣ್ಣಾಚಾರ್ಯ ಇವರ ಶಿಷ್ಯತ್ವ ಸ್ವೀಕರಿಸಿ ಹರಿದಾಸರಾದರು. ಇವರು ವಿಜಯದಾಸರನ್ನು ಈ ಕೆಳಕಂಡ ಕೃತಿಯಲ್ಲಿ ಹಾಡಿ ಹೊಗಳಿದ್ದಾರೆ.

'ಸ್ಮರಿಸಿ ಬದುಕಿರೋ ದಿವ್ಯ ಚರಣಕೆ ಎರಗಿರೋ,
ದುರಿತನ ತರಿದು ಪೊರೆವ ವಿಜಯ
ಗುರುಗಳೆಂಬೊ'

ಎಂದು ವಿಜಯದಾಸರು ಒಳ್ಳೆಯ ಕವಿತಾ ಸಾಮರ್ಥ್ಯ ಉಳ್ಳವರಾಗಿದರು. ಇವರ ಪ್ರಸಿದ್ಧವಾದ ಆಶೀರ್ವಾದ ಗಮನಿಸಿ.

'ಚಿರಂಜೀವಿ ಯಾಗೆಲೋ ಚಿನ್ನ ನೀನು
ಹರಿದಾಸ ದಾಸರಾ ಪಾದಧೂಳಾಗಿ
(1) ಜರಿಯ ಬೇಡ ಹರಿಯ ಮರೆಯಬೇಡೆಂದೆಂದೂ
ತಿರಿಯ ಬೇಡ ಬಳರ ಮನೆಗೆ ಪೋಗೀ
ಒರೆಯ ಬೇಡ ಅನ್ಯರಿಗೆ ರಹಸ್ಯ ತತ್ವಗಳ
ಬೆರೆಯಬೇಡ ಅನ್ಯ ಸತಿಯರ ಸ್ವಪ್ನದಲಿ ।
(2) ಸಾಲ ಮಾಡಲಿ ಬೇಡ ಸಾಲದೆಂದೆನ ಬೇಡ
ನಾಳೆಗೇ ಹೇಗೆಂಬ ಚಿಂತೆ ಬೇಡ
ಖೂಳ ಜನರೊಡನೆ ಮಿತ್ರತ್ವ ಮಾಡಲಿ ಬೇಡ ।
ಬಾಳುವರ ಸಂಗದಲಿ ಬಾಳೆಲೋ ಬಾಲ ।
(3) ಲೋಕವಾರ್ತೆಯು ನಿನ್ನ ಕಿವಿಗೆ ಕೇಳಿಸಬೇಡ ।
ಶ್ರೀಕಾಂತನಾ ವಾರ್ತೆ ಕೇಳದಿರಬೇಡ ।
ಪಾಕವನು ಮಾಡಿ ಏಕಾಂಗಿಯಾಗುಣಬೇಡ
ಲೌಕಿಕವನನುಸರಿಸಿ ದಣುಕೊಳಲಿ ಬೇಡ ।
(4) ಪಂಡಿತರು ಪಾಮರರು ಆರಿಗಾದರು ನಿನ್ನ
ಕಂಡವರಿಗೆಲ್ಲ ಕೌತುಕವ ತೋರೀ
ಹೆಂಡಿರು ಮಕ್ಕಳು ಅಳಿಯ ಸೊಸೆ ಮೊಮ್ಮಕ್ಕಳು
ಉಟ್ಟುಂಡು ದ್ವಿಜರು ಸಹ ಗಂಡುಗಲಿ ಯಾಗೀ।
(5) ಮಂದ ಮತಿಗಳ ಕೂಡೆ ಮಾತನಾಡದಿರು ಹರಿ
ನಿಂದಕರ ಕಣ್ಣೆತ್ತಿ ನೋಡ ಬೇಡಾ

ಇಂದಿರಾ ರಮಣ ಸಿರಿ ವಿಜಯ ವಿಠ್ಠಲನ ಚರಣ
ದ್ವಂದ್ವದಲಿ ಮಸ್ತಕವ ನೀಡದಿರ ಬೇಡಾ ।

ಈ ಆಶೀರ್ವಾದವನ್ನು ಯಾವ ರೋಗಗ್ರಸ್ತ ಮಗುವನ್ನು ಕುರಿತು ರಚಿಸಿ ಆಶೀರ್ವಾದ ಮಾಡಿದರೋ ಆ ಮಗುವೇ ಮುಂದೆ ಮೋಹನದಾಸರೆಂದು ಪ್ರಖ್ಯಾತಿಗೆ ಬಂದರು.

ವಿಜಯ ದಾಸರು ತಮ್ಮ ಆರಾಧ್ಯ ದೈವವನ್ನು ನಾನಾ ರೀತಿ ಹಾಡಿ ಹೊಗಳಿದ್ದಾರೆ. ತಿರುಪತಿಯ ವೆಂಕಟರಮಣನನ್ನು ಕುರಿತ ಈ ನಿಂದಾಸ್ತುತಿ. ಗಮನಿಸಿ.

ಜಯ ಮಂಗಳಂ ನಿತ್ಯ ಶುಭ ಮಂಗಳಂ

(1) ತೊಳಸದಕ್ಕಿಯ ತಿಂಬ ಕಿಲುಬು ತಳಿಗೇ ಉಂಬೋ
ಕೊಳಗದಲಿ ಹಣಗಳನು ಅಳೆದು ಕೊಂಬೋ
ಇಲ್ಲಕಾಸು ಎಂದು ಸುಳ್ಳು ಮಾತಾಡಿದರೆ
ಎಲ್ಲವನು ಕಸಕೊಂಬ ಕಳ್ಳದೊರೆಗೆ ಜಯ

(2) ತನ್ನ ನೋಡೇವೆಂದು ಮುನ್ನೂರು ಗಾವುದ ಬರೆ
ತನ್ನ ಗುಡಿಯವೊಕ್ಕ ಜನರಿಗೆಲ್ಲಾ
ಹೊನ್ನು ಹಣಗಳ ಕೊಂಡು ತನ್ನ ದರುಶನ ಕೊಡುದೆ
ಬೆನ್ನೊಡೆಯ ಹೊಯಿಸುವಾ ಅನ್ಯಾಯ ಕಾರಿಗೇ
॥ ಜಯ ॥

(3) ಗಿಡ್ಡ ಹಾರುವ ನಾಗಿ ದಾನವ ಬೇಡಿ
ದುಡ್ಡು ಕಾಸುಗಳಿಗೆ ಕೈಯ್ಯ ನೀಡಿ
ಅಡ್ಡ ಬಿದ್ದಾ ಜನರ ವಿಡ್ಡೂರಗಳ ಕಳೆದು
ದೊಡ್ಡವರ ಮಾಳ್ಪ ಸಿರಿ ವಿಜಯ ವಿಠ್ಠಲಗೆ ॥
ಜಯ ॥

ಇವರ ಬ್ಯಾಗಡೆ ರಾಗದ.

'ಅಂತರಂಗದ ಕದವು ತೆಗೆಯಿತಿಂದೂ' ಎಂಬ ಪದದಲ್ಲಿ ತಮ್ಮ ಆತ್ಮಾರಾಮನನ್ನು ನೋಡಲು ಅಡ್ಡಿಯಾಗಿದ್ದ ಶತೃಗಳಾದ ಅರಿಷಡ್ವರ್ಗಗಳನ್ನು ಜಯಿಸಿ ಶ್ರೀ ಹರಿಯ ದರುಶನವನ್ನು ಮಾಡಿದ್ದು ವರ್ಣಿಸಿದ್ದಾರೆ. ಕಾಂಬೋದೀ ರಾಗದ.

'ನಿನ್ನ ದರುಶನಕೆ ಬಂದನಲ್ಲವೋ ಮಹಾ
ಪುಣ್ಯ ನಂತರ ದಿವ್ಯ ಚರಣ ನೋಡಲು ಬಂದೆ
॥ ಪ ॥
ಎಲ್ಲಿ ನೋಡಲು ನೀನೇ ವ್ಯಾಪ್ತ ನಾಗಿರಲಿಕ್ಕೆ ।
ಇಲ್ಲಿಗೆ ಬಾಹ ಕಾರಣ ವ್ಯಾವುದೋ
ಸೊಲ್ಲಿಗೆ ಕಂಭದಿಂದಲಿ ತೋರಿದಾ ಮಹಾಮಹಿಮ,
ಅಲ್ಲಿ ಇಲ್ಲೇ ನಯ್ಯಾ ಬಲ್ಲ ಭಕುತರಿಗೆ ॥

ಭಗವಂತನನ್ನು ಹುಡುಕಿ ಭಕ್ತ ಹೋಗಬೇಕಾದ್ದೇ ಇಲ್ಲ. ಸರ್ವಾಂತರ್ಯಾಮಿಯಾಗಿದ್ದಾನೆ ಭಗವಂತ ಎಂಬ ಅರ್ಥ ದಾಸರದ್ದು. ತಮ್ಮ ಕರುಣಾಮೃತ ಸೂಳಾದಿಯಲ್ಲಿ

'ನೀ ಕಾಯದಿರೆ ಎನ್ನ ಕಾಯುವರಾರೋ ಕೃಷ್ಣ ।
ಬೇಕೋ ನೀನೇ ಕಾಯ ಬೇಕೋ ಕಾಮಧೇನು ॥
ನಾಕು ಲಾಲಿಸೋ ಮಮಕಾರ ತೊಲಗಿಸೋ ।
ಮೂಕೋ ಭವಾಂಬು ನಿಧಿ ಕರುಣಾಂಬುಧಿ ।
ಯಾಕಯ್ಯಾ ಯಾಕಯ್ಯಾ ನೀಕೈಯ್ಯ ಬಿಡುವುದು ।
ರಾಕಾಬ್ಜವದನ ಪಿನಾಕಿ ವಂದಿತನೆ ॥

ಎಂದು ಭಕ್ತರನ್ನು ಪಾಲಿಪುದು ನಿನ್ನ ಕರ್ತವ್ಯ ಎಂದು ಆ ಶ್ರೀ ಹರಿಗೇ ಜ್ಞಾಪಿಸಿದಿದ್ದಾರೆ.

ವಿಜಯದಾಸರು ತಮ್ಮ ಶಿಷ್ಯರಿಗೆ ಹಬ್ಬ ಎಂದರೇನು. ಹಬ್ಬವನ್ನು ಆಚರಿಸುವುದೆಂತು. ಎಂಬ ಬಗ್ಗೆ ಉಪದೇಶಿಸಿರುವುದು ನೋಡಿ.

'ಕಾಮಕ್ರೋಧಂಗಳ ಬಿಡುವುದೇ ಬಲು ಹಬ್ಬ,
ನೇಮ ನಿಷ್ಠೆ ನಿತ್ಯ ಮಾಳ್ಪುದೇ ಬಲು ಹಬ್ಬ,
ಕಾಮನ ಉಪಹತಿಗೆ ಅಂಜುವುದೇ ಹಬ್ಬ,
ಕಾಮುಕ ಜನಗಳ ಬಿಡುತಿಪ್ಪುದೇ ಹಬ್ಬ,
ಭೂಮಿಯೊಳಗೆ ಜ್ಞಾನಿಯಾಗುವುದೇ ಹಬ್ಬ,
ಸ್ವಾಮಿ ಭೃತ್ಯನ್ಯಾಯ ತಿಳಿಯುವುದೇ ಬಲುಹಬ್ಬ,
ವ್ಯೋಮ ಗಂಗಾಜನಕ ವಿಜಯ ವಿಠ್ಠಲನ,
ಧಾಮದೊಳಗೆ ಪೂಜೆ ಮಾಡುವುದೇ ಹಬ್ಬ,

ಹಬ್ಬವೆಂದರೆ ಉಂಡುಟ್ಟು ಓಲಾಡುವುದಲ್ಲ. ನಿಜವಾದ ಹಬ್ಬ ಇರುವುದು ಮಾನವನ ಸಾರ್ಥಕ್ಯ ಜೀವನದಲ್ಲಿ ಹಾಗೂ ಆ ಶ್ರೀ ಹರಿಯನ್ನು ಪೂಜಿಸುವುದರಲ್ಲಿ ಎಂದಿದ್ದಾರೆ ದಾಸರು.

ವಿಜಯದಾಸರ ನಿಲುವನ್ನು ತೋರಿಸುವ ಈ ರಚನೆ ಗಮನಿಸಿ

'ಎನ್ನದೆಂಬೋ ಮಾತು ಎಂದೆಂದಿಗೂ ಬೇಡ,
ನಿನ್ನವನು ನಿನ್ನವನು ನಿನ್ನವನೆಂದೆನಿಸಿ,
ಮನ್ನಿಸಿ ಪಾಲಿಸೈ ವಿಜಯ ವಿಠ್ಠಲ,

ಎಂದಿದ್ದಾರೆ. ಸರ್ವಸಮರ್ಪಣಾ ಭಾವವನ್ನು ಈ ಕೃತಿಯಲ್ಲಿ ಕಾಣಬಹುದು. ವಿಜಯದಾಸರು ತಮ್ಮ ಗುರುಗಳಾದ ಪುರಂದರದಾಸರ ಸಾಹಿತ್ಯವನ್ನು ಕ್ರೋಢೀಕರಿಸಿ ಸಮಾಜಕ್ಕೆ ನೀಡಿ ಉಪಕಾರ ಮಾಡಿರುವುದಲ್ಲದೆ, ತಮ್ಮ ಅಮೂಲ್ಯವಾದ ಸಾಹಿತ್ಯವನ್ನು ಅಪಾರವಾದ ಶಿಷ್ಯರನ್ನೂ ಸಮಾಜಕ್ಕೆ ನೀಡಿದರು. ಇವರ 'ಕಂಕಣಾಕಾರ ಸೂಳಾದಿಗಳು' ಬಹಳ ಪ್ರಖ್ಯಾತವಾಗಿವೆ. . ಇವರ ಶಿಷ್ಯರಲ್ಲಿ ಅಗ್ರಗಣ್ಯರು 'ಗೋಪಾಲದಾಸರು' ಮತ್ತು ಮೋಹನದಾಸರು.

**ಗೋಪಾಲ ದಾಸರು**

ಗೋಪಾಲ ದಾಸರು ವಿಜಯದಾಸರ ಶಿಷ್ಯರಲ್ಲಿ ಅಗ್ರಗಣ್ಯರು. ಇವರ ಕಾಲ 1722 -1765. ಇವರು ಬಾಲ್ಯದಲ್ಲಿ ತಾಯಿ ಹಾಗೂ ತಮ್ಮ ಮೂರು ಜನ ತಮ್ಮಂದಿರೊಂದಿಗೆ ಬಹಳ ಬಡತನ ಅನುಭವಿಸಿದ್ದಾರೆ. ಇವರ ತಾಯಿ ಕಣಭಿಕ್ಷ ಮಾಡಿ ಮಕ್ಕಳನ್ನು ಸಾಕಿ ತಮ್ಮ ಹಿರಿಯ ಮಗನಾದ ಭಾಗಣ್ಣ (ಗೋಪಾಲದಾಸ್‌ರ ಲೌಕಿಕ್‌ನಾಮ)ನಿಗೆ ಉಪನಯನ ಮಾಡಿದರು. ಇವರು ಉಪನಯನಾ ನಂತರ ಗಾಯತ್ರೀ ಮಂತ್ರದ ಪುನಶ್ಚರಣೆಯನ್ನು ತಪಸ್ಸಿನೋಪಾದಿಯಲ್ಲಿ ಮೌನವಾಗಿ ನಿರಂತರ ಆಚರಿಸಿ ಆಧ್ಯಾತ್ಮಿಕ ಶಕ್ತಿ ಪಡೆದರಂತೆ. ಇವರಿಗೆ ತಾಯಿ ಗಾಯತ್ರಿಯ ಅನುಗ್ರಹದಿಂದ ಕವಿತಾ ಸಾಮರ್ಥ್ಯ ಪ್ರಾಪ್ತವಾಯಿತೆಂದೂ ಇದಲ್ಲದೆ ಇವರಿಗೆ ಮನುಷ್ಯರ ಮುಖನೋಡಿ ಅವರ ಹಿಂದಿನ ಮೂರು ಜನ್ಮಗಳನ್ನು ಕುರಿತು ಹೇಳುವ ಅಪರೋಕ್ಷ ಜ್ಞಾನವೂ ಇವರದಾಯ್ತಂತೆ. ಇವರ ಬಗ್ಗೆ ಭಕ್ತಿಯಲಿ ಭಾಗಣ್ಣ ಎಂಬ ನಾಣ್ನುಡಿ ಪ್ರತೀತಿಗೆ ಬಂತು ಎಂಬುದಾಗಿ 'ಕರ್ನಾಟಕ ಭಕ್ತಿ ವಿಜಯದಿಂದ ತಿಳಿದು ಬರುತ್ತದೆ. ಇವರ ಶಿಷ್ಯರಲ್ಲಿ ಪ್ರಖ್ಯಾತರಾದ ವಿದ್ವಾಂಸರಾದ 'ಜಗನ್ನಾಥದಾಸರು' ಪ್ರಮುಖರು. ಜಗನ್ನಾಥ'ದಾಸರು ಉದರ ಶೂಲೆಯಾಂದ ನರಳುತ್ತಿದ್ದರೆಂದೂ ಹಾಗೂ ಅಲ್ಪಾಯುಷಿಗಳಾಗಿದ್ದರೆಂದೂ, ಗೋಪಾಲದಾಸರು ತಮ್ಮ ಆಯುಸ್ಸಿನಲ್ಲಿ 40 ವರ್ಷ ಆಯುರ್ದಾನ ಮಾಡಿ ಆ ಉದರ ಶೂಲೆಯನ್ನು ತಾವು ತೆಗೆದುಕೊಂಡರೆಂದೂ ಇವರು ಉದರ ಶೂಲೆಯಿಂದ ನರಳಲು ಪ್ರಾರಂಭಿಸಿದಾಗ ಇವರ ತಮ್ಮಂದಿರಾದ ದಾಸಪ್ಪದಾಸರು ತಮ್ಮ ದೈವೀಶಕ್ತಿಯಿಂದ ಇವರ ಉದರ ಶೂಲೆಯನ್ನು ಹೋಗಲಾಡಿಸಿದರಂತೆ. ಈ ಕಥೆಯ ಬಗ್ಗೆ ಜಗನ್ನಾಥದಾಸರ ಒಂದು ರಚನೆ ಇದೆ. ಉತ್ತರಾಧಿ ಮಠದ ಸತ್ಯಬೋಧರಿಂದ ತಮ್ಮ ಜ್ಞಾನ ಭಕ್ತಿಗಾಗಿ ಪುರಸ್ಕೃತರಾದವರು ಇವರು 233 ಪದಗಳನ್ನೂ 71 ಸುಳಾದಿಗಳನ್ನು ರಚಿಸಿದ್ದಾರೆ.

ಗೋಪಾಲದಾಸರ ಸಾಹಿತ್ಯದಲ್ಲಿ ಮಧ್ವಮತ ದನಿಷ್ಠೆ ಅಪಾರವಾಗಿದೆ. ಮಧ್ವಮತ ಸಿದ್ಧಾಂತ ಪ್ರಮೇಯಗಳನ್ನು ಸರಳವಾಗಿ ನಿರೂಪಿಸುವುದೇ ಅವರ ಉದ್ದೇಶ ಹಾಗೂ ಪರಮ ಗುರಿಯಾಗಿದೆ. ಇವರ ರಚನೆಗಳಲ್ಲಿ ತತ್ವರೂಪಣೆಗೆ ಹೆಚ್ಚಿನ ಪ್ರಾಧಾನ್ಯ ಸಂದಿದ್ದು ಇವರ ಕೃತಿಗಳಲ್ಲಿ ತತ್ವ ತಿಳಿಸುವ ಕೃತಿಗೆ ಪ್ರಾಧಾನ್ಯ ಹೆಚ್ಚಿದೆ. ಸ್ವಮತ ಪ್ರತಿಷ್ಠಾಪನೆಯ ವೀರ ನಿಷ್ಠೆಯಲ್ಲಿ ಪರಮತ ಖಂಡನೆಯೂ ಇದೆ.

ಈ ಕೃತಿಯನ್ನು ಗಮನಿಸಿ

'ಪದ್ಧತಿ ತಿಳಿಸಿನ್ನು ಮಧ್ವಮತಾನು ಸಾರ,
ಶುದ್ಧ ಜ್ಞಾನವ ಕೊಟ್ಟ, ಪದ್ಧ ಮತಗಳನ್ನ
ವೇದ್ಧವೆನಿಸಿ ಪೊದ್ದಿಸದಂತಹ ಒದ್ದು ಕಡೆಗೆ ನೂಕಿ,
ತಿದ್ದಿಸಿಲಿ ಎನ್ನನು ಉದ್ಧರಿಸು'

ಎಂದು ಹೇಳುವಲ್ಲಿ ಮಧ್ವಮತದ ಬಗೆಗಿನ ಅವರ ಆದರ ವ್ಯಕ್ತವಾಗಿದೆ. ಇಲ್ಲಿ ಹರಿದಾಸರೆಲ್ಲರೂ ಸ್ವಮತ ಪ್ರತಿಷ್ಠೆಗಾಗಿ ಅನ್ಯಮತಗಳನ್ನು ಟೀಕಿಸುವುದು, ತೆಗಳುವುದೂ ಉಂಟು. ಆದರೆ ಗೋಪಾಲದಾಸರು ಸ್ವಮತ ಪ್ರಚಾರದ ಭರದಲ್ಲಿ ಪರಮತಗಳನ್ನು ಕಟುವಾಗಿಯೇ ಟೀಕಿಸಿದ್ದಾರೆ. ಮಧ್ವಮತವನ್ನು ಬಿಟ್ಟರೆ ಉಳಿದೆಲ್ಲ ಮತಗಳೂ ಖೂಳ ಮತಗಳೇ !

'ಖೂಳ ಮತವ ಬಿಡೆ ಬಾಳಲಾರೆಯಾ ನೀನು'
ಎಂದಿರುವ ಅವರು ಮುಂದುವರಿದು,
'ಸೀಳೋರು ಜಿಹ್ವೆಯ ಕೀಳೋರು ಕಣ್ಣನ್ನು ।
ಹೋಳು ಮಾಡೋರ ತಲೆ ಆಳಾಗದಂತೆ ನಿನ್ನ ।
ಹೂಳೋರು ಕ್ರಿಮಿ ಕೊಂಡದೊಳು ನಿನ್ನನೊಯ್ದು ।

ಎಂದು ಹೇಳುತ್ತಾರೆ ಹಾಗೂ ಅದ್ವೈತ ತತ್ವವನ್ನು ಖಂಡಿಸುತ್ತಾ 'ಇಲ್ಲಿ ಮಾತ್ರವು ಭೇದ ಅಲ್ಲಿ ಒಂದೇ ಎಂಬೋ ಕ್ಷುಲ್ಲಕರ ಹಿಡಿದ್ದಲ್ಲು ಮುರಿಯೆಂದು ಟೀಕಿಸಿದ್ದಾರೆ. (ಸಮಗ್ರ ದಾಸ ಸಾಹಿತ್ಯ ದರ್ಶನದಿಂದ H.S.K.)

ಅನಂತ ಒಂದೇ ದೈವ ಎಂದು ಧೃಢವಾಗಿ ನಂಬಿರುವ ಇವರು ಇತರ ದೇವಿಯನ್ನು ಒಪ್ಪುವುದಿಲ್ಲ. ಆದ್ದರಿಂದಲೇ ಅವರು (ಬಣಗು ದೈವಂಗಳ ಭಕ್ತಿಯಲರ್ಚಿಸುವುದೇ ಹೇಣಕ್ಕೆ ಮಾಡುವ ಅರ್ಥ' ಎಂದು ಟೀಕಿಸುವುದೇ ಅಲ್ಲದೆ.

'ಇತರ ದೈವರ ಗಂಡ ಚಿಲ್ಲರೆ ದೈವ ಗಂಡರ ಗೋಪಾಲ ವ್ಠಿಠಲ' ಎಂದೂ ಹೇಳಿದ್ದಾರೆ.

ಇವರು ಬ್ರಹ್ಮಚಾರಿಗಳಾಗಿದ್ದರು. ಇವರ ಕವಿತಾ ಸಾಮರ್ಥ್ಯ ಹಾಗೂ ಶಬ್ದ ಭಂಡಾರ ಅದ್ವಿತೀಯ ವಾಗಿದೆ. ಕೆಳಕಂಡ ರಚನೆ ಗಮನಿಸಿ.

'ಭುಂಗಿ ಭುಂಗಿಗೆ ಬ್ರಹ್ಮಾಂಡವೆಲ್ಲಾ ಗದ್ದರಿಸಿನ್ನು
ಧಗ ಧಗಾಮಯ ಮಾನವಾಗಿ ಜಗವೆಲ್ಲ ಇದೆ
ಯುಗ ಮಹಾ ಪ್ರಲಯವ್ವೋ ಎಂದು ತೋರುತಿರಲು
ಧಿಗಿ ಧಿಗಿ ಕಂಭದಿಂದ
ಝುಗ ಝುಗಾ ಎಂದು ಜನಿಸಿ ಮೃಗನ ರೂಪವ
ಸೊಗಸಾಗಿ ಧರಿಸಿ ಶ್ರೀವತ್ಸ ಶಂಕ ಚಕ್ರ
ಯುಗ ಭುಜಗಳಲ್ಲಿ ಬಪ್ಪ ಈಶ ಸರ್ವೇಶ'

ಈ ಕೃತಿಯಲ್ಲಿ ನೃಸಿಂಹಾವತಾರದ ಭವ್ಯ ಚಿತ್ರಣವನ್ನು ಚಿತ್ರಿಸಿದ್ದಾರೆ. ಗೋಪಾಲದಾಸರು ತಾವು ನಂಬಿದ ಭಗವಂತನಲ್ಲಿ ನಿನ್ನನ್ನು ಮತ್ತೇನು ಬೇಕೆಂದು ಬೇಡಲಿ ನೀನು ಕೊಟ್ಟಿರುವುದೇ ಬೇಕಾದಷ್ಟಿದೆ ಎಂದು ಸ್ತುತಿಸಿದ್ದಾರೆ. ಈ ಕೃತಿಯಲ್ಲಿ.

॥ ಪ ॥ ಏನಬೇಡಲಿ ನಿನ್ನ ಬಳಿಗೆ ಬಂದು ನೀನಿತ್ತ ಸೌಭಾಗ್ಯ ನಿಬಿಡವಾಗಿರುತಿರಲು ।
॥ ಅ ॥ ಜನನಿಯ ಕೊಡು ಎಂದು ಜಗದೀಶ ಬೇಡುವನೇ । ಜನನಿ ಏನಿತ್ತಳಾ ಧ್ರುವರಾಯಗೆ ।
ಜನಕನ ಕೊಡು ಎಂದು ಜಯವಂತ ಬೇಡುವನೇ ।
ಜನಕನೇನಿತ್ತ ನಾ ಪ್ರಹ್ಲಾದಗೆ ।
ಅನುಜನಾಕೊಡು ಎಂದು ಅತಿ ಶಂತುದಿ ಬೇಡುವನೇ।
ಅನುನಿತ್ತ ನಾ ವಾಲಿಗೆ ।
ಧನವನಾ ಕೊಡು ಎಂದು ದೈನ್ಯದಲಿ ಬೇಡುವನೇ ।
ಧನವಗಳಿಸಿದ ಅವಧೂತ ಏನಾದನೋ ।
ಸತಿಯಳನು ಕೊಡು ಎಂದು ಸುಖದಿಂದ ಬೇಡುವನೇ।
ಸತಿಯಿಂದ ದ್ಯುನಾಮಕ ಏನಾದನೊ ಸುತರನ್ನು ಕೊಡು ಎಂದು ಸುಖದಿಂದ ಬೇಡುವನೇ । ಸುತರಿಂದ ಧೃತರಾಷ್ಟ್ರ ಏಸುಖದ ಕಂಡ । ಬಂಧುಗಳಕೊಡು ಎಂದು ಛಂದದಲಿ ಬೇಡುವನೇ। ಬಂಧು ಗಳೇನಿತ್ತರಾ ಗಜರಾಜಗೆ। ಅಂದಣವನೇರುವ ಭಾಗ್ಯವ ಬೇಡುವನೇ। ಅಂದಣವನೇರಿದ ನಹುಷ ಏನಾದನಯ್ಯಾ । ಬೇಡುವೆನು ನಾನೊಂದು ಬೇಡತಕ್ಕದೇ ದೇವ । ನೀಡೆನೆಂಬುದು ನಿನ್ನ ಮನದೊಳತ್ತೇ। ಮೂಢಲಾಧೀಶ ಗೋಪಾಲ ವಿಠ್ಠಲ ಬೇಡದಂತೆ ಪರರ ಮಾಡಯ್ಯ ದೊರೆಯೆ ।

ಯಾರನ್ನು ಬೇಡಬೇಕಿಲ್ಲ. ತೃಪ್ತಿ ಇದ್ದಲ್ಲಿ ಮನುಷ್ಯನಿಗೆ ಎಂಬ ಭಾವದಾಸರದು ಅವರ ಆರಾಧ್ಯ ದೈವವಾದ ಶ್ರೀ ಹರಿ ಸರ್ವತಂತ್ರ ಸ್ವತಂತ್ರ, ಸರ್ವಜ್ಞ, ಸರ್ವವ್ಯಾಪಕ, ಆದ್ದರಿಂದಲೇ ಗೋಪಾಲದಾಸರು ಹೀಗೆ ಸ್ತುತಿಸಿದ್ದಾರೆ.

'ಎಲ್ಲಿ ನೋಡಲು ನೀನಿಲ್ಲದ ಸ್ಥಳವಿಲ್ಲ ।
ಎಲ್ಲರಂತರ್ಯಾಮಿ ಎಲ್ಲಿಯೂ ನೀನೇ ।
ವಿಶ್ವತೋ ಮುಖ ನೀನೆ ವಿಶ್ವತೋ ಚಕ್ಷು ನೀನೆ ।
ವಿಶ್ವ ವ್ಯಾಪಕ ಸರ್ವ ವಿಶ್ವಮಯನು ನೀನೇ ।
ವಿಶ್ವನಾಯಕ ಹರಿ ಗೋಪಾಲ ವಿಠ್ಠಲ ।
ವಿಶ್ವಾಸ ಕೊಡು ನಿನ್ನ ವಿಶ್ವ ಚರಣದಲಿ ।

ಈ ರೀತಿ ವಿಶ್ವಾಧಾರನಾದ ಶ್ರೀ ಹರಿಯನ್ನು ಸ್ತುತಿಸಿದ್ದಾರೆ. ಇವರ ರಚನೆಗಳಲ್ಲಿ 3 ನುಡಿಗಳ ಚಿಕ್ಕರಚನೆಯನ್ನೂ ಕಾಣಬಹುದು. ಉಗಾಭೋಗ ತೀರಾ ಕಡಿಮೆ ಸುಳಾದಿಗಳನ್ನು ಹೆಚ್ಚಾಗಿ ರಚಿಸಿದ್ದಾರೆ. ಹರಿದಾಸ ಸಾಹಿತ್ಯದಲ್ಲಿ ದ್ವಿತೀಯ ಘಟ್ಟವು ದ್ವೈತ ಸಿದ್ಧಾಂತವನ್ನು ವಿಶೇಷವಾಗಿ ಕನ್ನಡಿಸಿದ್ದು ಆದರಲ್ಲಿ ಗೋಪಾಲದಾಸರ ಸೇವೆ ಗಮನಾರ್ಹವಾದದ್ದು. ದಾಸ ಚತುಷ್ಟಯರಲ್ಲಿ ಗೋಪಾಲದಾಸರೂ ಒಬ್ಬರು ಇವರ ಶಿಷ್ಯ ಕೋಟಿ ಅಪಾರವಾಗಿತ್ತು ಇವರ ಶಿಷ್ಯರಲ್ಲಿ ಜಗನ್ನಾಥದಾಸರಲ್ಲದೆ ಗದ್ವಾಲದ ಸುಬ್ಬಣ್ಣದಾಸರು (ಕೇಶವ ವಿಠಲ ಅಂಕಿತ) ಸೀನಪ್ಪದಾಸರು ಗುರುಗೋಪಾಲ ವ್ಠಿಠಲ) ದಾಸಪ್ಪದಾಸರು (ವರದಗೋಪಾಲ ವ್ಠಿಠಲ) ಇವರೆಲ್ಲಾ ಗೋಪಾಲದಾಸರ ಶಿಷ್ಯ ಪೀಳಿಗೆಯನ್ನು ಮುಂದುವರಿಸಿದ್ದಾರೆ. ಗೋಪಾಲದಾಸರ ಅಂಕಿತ 'ಗೋಪಾಲ ವಿಠ್ಠಲ'

(ಮುಂದುವರಿಯುವುದು)

## THE MYSORE ASSOCIATION, BOMBAY

393, Bhaudaji Road, Matunga,
Mumbai-400 019.
Phone : 402 4647 / 403 7065

## VAASTU SHANTI POOJA

With the Completion of present building extension, Vaastu Shanthi Pooja is being conducted at the Association, on Thursday, the 16th September 99, from 10-30 a.m. to 12-30p.m. The details are as under:

- Ganapathi Pooja
- Punyaha Vachana
- Navagraha Pooja
- Vaastu Pooja
- Vaastu Homa
- Poornahuthi
- Mahamangalarathi
- Prasad Vinayoga

In the evening at 6-30 p.m. in keeping with tradition of our Association, the elder and senior members will do a pooja of the stage and auditorium and offer their good wishes to the younger generation.

We invite you to kindly attend and participate in this event.

### Inauguration of the Auditorium

We are pleased to inform you that Excellency the Governor of Maharashtra has kindly consented to inaugurate our newly built Auditorium on Saturday, the 16th of October 1999. The details of the programme for the Inauguration will be communicated to separately.

Hon. Secretary
**The Mysore Association,**
Bombay.

# ಗಿರೀಶ್ ಕಾಸರವಳ್ಳಿಯವರ ಚಿತ್ರೋತ್ಸವ

## ಗಿರೀಶ್ ಕಾಸರವಳ್ಳಿಯವರ ಚಿತ್ರಪ್ರದರ್ಶನ ಹಾಗೂ ಚಿತ್ರಗಳ ಬಗ್ಗೆ ಚಿಂತನ (Retrospective)

ತಾ. 19-7-99ರಿಂದ ತಾ. 23ರ ವರೆಗೆ 5 ದಿನ ಯಶವಂತರಾವ್ ಚೌಹಾನ್ ಪ್ರತಿಷ್ಠಾನದಲ್ಲಿ ಮೈಸೂರು ಅಸೋಸಿಯೇಷನ್ ಹಾಗೂ ಪ್ರಭಾತ್ ಚಿತ್ರ ಮಂಡಲದ ಜಂಟೀ ಕಾರ್ಯಕ್ರಮವಾಗಿ ಹೆಸರಾಂತ ಕನ್ನಡ ಚಿತ್ರ ನಿರ್ದೇಶಕರೂ, ಮೂರು ಬಾರಿ ಕೇಂದ್ರ ಸರಕಾರದ ಸ್ವರ್ಣಕಮಲ ವಿಜೇತರೂ ಆದ 'ಗಿರೀಶ್ ಕಾಸರವಳ್ಳಿ'ಯವರ 5 ಪ್ರಶಸ್ತಿ ಪಡೆದ ಚಿತ್ರ ಪ್ರದರ್ಶನ ಮತ್ತು ಗಿರೀಶ್ ಕಾಸರವಳ್ಳಿಯವರ ಚಿತ್ರಗಳ ಬಗ್ಗೆ ಚಿಂತನ ನಡೆಯಿತು.

ಪ್ರಭಾತ್ ಚಿತ್ರಮಂಡಲದ ಅಧ್ಯಕ್ಷರೂ ಸಿನಿಮಾ ಕಲಾವಿದ, ನಿರ್ದೇಶಕ, ನಿರ್ಮಾಪಕರೂ ಆದ ಅಮೋಲ್ ಪಾಲೇಕರ್ ನೇತೃತ್ವದಲ್ಲಿ ಒಂದು ಸಿನಿ ತ್ರೈಮಾಸಿಕವನ್ನು ಹೊರತಂದು ಗಿರೀಶ್ ಕಾಸರವಳ್ಳಿಯವರಿಂದ ಬಿಡುಗಡೆ ಮಾಡಿಸಲಾಯ್ತು. ಆ ಪತ್ರಿಕೆಯೇ 'ರೂಪವಾಣಿ'.

ಗಿರೀಶ್ ಕಾಸರವಳ್ಳಿ ಹಾಗೂ ಅವರ ಚಿತ್ರಗಳ ಬಗ್ಗೆ ಮಾತನಾಡುತ್ತಾ ಶ್ರೀಮತಿ ಮೈಥಿಲೀ ರಾವ್ ಕಾಸರವಳ್ಳಿಯವರು ಹಾಗೂ ಅವರ ಚಿತ್ರಗಳ ಪರಿಚಯ ಎಲ್ಲರಿಗೂ ಇದೆ. ಕಾಸರವಳ್ಳಿ ಅಂತರ್‍ರಾಷ್ಟ್ರೀಯ ಜಾತಿಯ ನಿರ್ಮಾಪಕ ಗಿರೀಶ್ ಕಾರ್ನಾಡ್ ಹಾಗೂ ಕಾಸರವಳ್ಳಿಯಂತಹ ಲೇಖಕರು ನಿರ್ಮಾಪಕರು ಚಿಂತನಶೀಲ ವ್ಯಕ್ತಿಗಳ ಬಗ್ಗೆ ಎಷ್ಟು ಹೇಳಿದರೂ ಹೇಳುವುದಿರುತ್ತದೆ. ಕಾಸರವಳ್ಳಿ ತಮ್ಮ ಚಿತ್ರಗಳ ಮೂಲಕ ಸಮಾಜದಲ್ಲಿರುವ ನ್ಯೂನತೆಗಳು, ಕೊರತೆಗಳು, ಅಮಾನವೀಯತೆ, ಮಾನವನ ಆಶೋತ್ತರಗಳನ್ನು ಪ್ರತಿಬಿಂಬಿಸುವುದಲ್ಲದೆ ಧರ್ಮ, ದೈವದಂತಹ ವಿಚಾರಗಳನ್ನು ಅತ್ಯಂತ ಯಶಸ್ವೀ ರೀತಿಯಲ್ಲಿ ತಮ್ಮ ಚಿತ್ರಗಳಲ್ಲಿ ತಂದಿದ್ದಾರೆ. 21 ವರ್ಷಗಳ ನಿರಂತರ ದುಡಿಮೆ, ಪರಿಶ್ರಮ, ಸಂಶೋಧನೆ, ಚಿಂತನೆಗಳಿಂದ ಸಮಾಜಕ್ಕೆ ಶ್ರೇಷ್ಠ ಚಿತ್ರಪಟಗಳನ್ನಿತ್ತಿದ್ದಾರೆ ಎನ್ನುತ್ತಾ ಇವರ ಚಿತ್ರಗಳು ಮನುಷ್ಯನ ಮನ ಕಲಕುವಂತಹವು. ಮನುಷ್ಯನನ್ನು ವಿಚಾರಮಾಡಲು ಚಿಂತನೆ ಮಾಡಲು ಪ್ರೇರೇಪಿಸುವಂತಹವು ಎಂದು ಅಭಿಪ್ರಾಯಪಟ್ಟರು.

ಸಿನಿ ಕಲಾವಿದ ಅಮೋಲ್‌ಪಾಲೇಕರ್‌ರವರು ಗಿರೀಶ್ ಕಾಸರವಳ್ಳಿಯವರಿಗೆ ಶಾಲು ಹೊದಿಸಿ ಪುಷ್ಪ ಗುಚ್ಛವನ್ನಿತ್ತು ಸನ್ಮಾನಿಸಿದರು. ಕಾಸರವಳ್ಳಿ ಯವರು



*Mr. Girish Kasavalli being felicitated by the secretary of Mysore Association, Mr. M.A.N. Prasad, Mr. Amol Palekar is in the background*

ರೂಪವಾಣಿಯ ಹಗ್ಗೆ ಮಾತನಾಡುತ್ತಾ ಮರಾಠಿ ಮತ್ತು ಮರಾಠೇತರ ಭಾರತೀಯ ಭಾಷೆಗಳೇ ಆದರ ಬಗ್ಗೆಯೂ ರೂಪವಾಣಿ ತನ್ನ ಗಮನ ಹರಿಸುವುದೆಂದರು. ಭಾರತದಲ್ಲಿ ಸಿನಿ ಪತ್ರಿಕೆಗಳಿದ್ದಾಗ್ಯೂ ಅವು ಸಮಗ್ರ ಚಿತ್ರ ರಂಗದ ಬಗ್ಗೆಯಾಗಲೀ ಇಲ್ಲಾ ನಿರ್ದೇಶನದ ಆಶೋತ್ತರಗಳು ಬಗ್ಗೆಯಾಗಲೀ ಕೆಲಸಮಾಡುವುದು ಕಡಿಮೆ ಆ ಕೊರತೆ ರೂಪವಾಣಿಯಿಂದ ತುಂಬಲಿ ಎಂದು ಎಂದು ಆಶಯ ವ್ಯಕ್ತಪಡಿಸಿದರು.

ಅಂದಿನ ಹಾಗೂ ತಮ್ಮ ಚಿತ್ರಗಳ ಬಗ್ಗೆ ಮಾತನಾಡುತ್ತಾ ನನ್ನ ಚಿತ್ರಗಳನ್ನು ಕನ್ನಡಿಗರು ಹಾಗೂ ನನ್ನ ಮಿತ್ರರು ನೋಡಬೇಕೆಂಬುದೆ ನನ್ನಾಸೆ. ನನ್ನ ಮಿತ್ರ ವೃಂದ ಸ್ವದೇಶ ಹಾಗೂ ವಿದೇಶದಲ್ಲೂ ಹರಡಿದೆ. ನಾನು ನನ್ನ ಮಿತ್ರರಿಗಾಗಿಯೇ ಚಿತ್ರ ತೆಗೆಯುತ್ತೇನೆಂದರು. ಪ್ರಭಾತ್ ಚಿತ್ರಮಂಡಲ, ಹಾಗೂ ಮೈಸೂರು ಅಸೋಸಿಯೇಷನ್ ಎರಡಕ್ಕೂ ನನ್ನ ಧನ್ಯವಾದಗಳು. ಈ ಎರಡು ಸಂಸ್ಥೆಗಳೂ ನನ್ನ ಚಿತ್ರಪ್ರದರ್ಶನವನ್ನೇರ್ಪಡಿಸುತ್ತಿವೆ ಎಂದು ಧನ್ಯವಾದವನ್ನು ಅರ್ಪಿಸಿದರು. ಮೈಸೂರು ಅಸೋಸಿಯೇಷನ್ನಿನ ಪರವಾಗಿ ಕಾರ್ಯದರ್ಶಿಗಳಾದ M.A.N. ಪ್ರಸಾದ್ ಅವರು ಕಾಸರವಳ್ಳಿಯವರಿಗೆ ಪುಷ್ಪಗುಚ್ಛವನ್ನಿತ್ತು ಗೌರವಿಸಿದರು.

(1) ಮೊಟ್ಟ ಮೊದಲ ಚಿತ್ರ 'ಘಟಶ್ರಾದ್ಧ' ಜ್ಞಾನಪೀಠ ಪ್ರಶಸ್ತಿ ವಿಜೇತರಾದ U.R. ಅನಂತಮೂರ್ತಿಗಳ ಕಥೆಯಾಧಾರಿತ ಚಿತ್ರ. ಕಥಾವಸ್ತು ಬದುಕಿದ್ದಂತೆಯೇ ಮಗಳಿಗೆ ತಂದೆ ಮಾಡುವ ಶ್ರಾದ್ಧ ಬ್ರಾಹ್ಮಣ ಅಗ್ರಹಾರದ ಉಡುಪರು ಮಹಾ ವಿದ್ವಾಂಸರು ಸಂಸ್ಕೃತ ಪಾಠಶಾಲೆ ನಡೆಸುತ್ತಿರುವ ಮೇಧಾವಿ ಇವರ ಮಗಳು ಕಿರಿ ವಯಸ್ಸಿನ ವಿಧವೆ ವಿಧವೆಯಾದ ಯಮುನ ಜೀವನದಲ್ಲಿ ಎಡವಿದಾಗ ಅಗ್ರಹಾರದ ಬ್ರಾಹ್ಮಣ ಸಮಾಜಕ್ಕೆ ಪ್ರತಿಯಾಡದೆ ಬದುಕಿದ್ದ ಮಗಳಿಗೆ ಶ್ರಾದ್ಧ ಮಾಡಿ ಶಾಶ್ವತವಾಗಿ ಮಗಳಿಗೆ ಮನೆ ಬಾಗಿಲು ಮುಚ್ಚಿ, ಮಹಾ ಬ್ರಾಹ್ಮಣರಾಗಿ ಅಗ್ರಹಾರದಲ್ಲೇ ಉಳಿದವರು. ಮಗಳ ಪರಿಸ್ಥಿತಿ ಅರ್ಥಮಾಡಿಕೊಳ್ಳಲಿಲ್ಲ ಉತ್ತಮ ತಂದೆಯೂ ಆಗಲಿಲ್ಲ.

ತಾಯಿಯಿಲ್ಲದ ಯಮುನ ಎಳೆಹರೆಯದಲ್ಲಿ ವಿಧವೆಯಾಗಿ ತನಗೆ ಸಿಕ್ಕದ ಸುಖಕ್ಕಾಗಿ ಜೀವನದಲ್ಲಿ ಎಡವಿದಾಗ ಮನೆಯಿಂದ ಸಮಾಜದಿಂದ ಬಹಿಷ್ಕೃತಳಾದ ನತದೃಷ್ಟೆ. ಯಮುನ ಮತ್ತವಳ ಪ್ರಿಯಕರ ಇಬ್ಬರ ತಪ್ಪು ಸಮಾನವಾಗಿದ್ದರೂ ಅಬಲೆಯಾದ ಹೆಣ್ಣಿಗೆ. ಶಿಕ್ಷೆ ವಿಧಿಸಿ ಧರ್ಮೋದ್ಧಾರ ಮಾಡಿದೆವೆಂದೂ ಸಾರ್ಥಕ ಪಡೆದೆವೆಂದೂ ಬೀಗಿದ ಅಗ್ರಹಾರದ ಬ್ರಾಹ್ಮಣ ಸಮಾಜ. ತಾಯಿಯನ್ನು ಬಿಟ್ಟು ಉಡುಪರಲ್ಲಿ ವಿದ್ಯಾಭ್ಯಾಸಕ್ಕೆ ಬಂದ ಕಿರಿ ವಯಸ್ಸಿನ ನಾಣಿ. ಯಮುನಕ್ಕನಲ್ಲಿ ತನ್ನ ತಾಯಿಯನ್ನು ಕಂಡು, ಅವಳೊಂದಿಗೆ ಸೂಕ್ಷ್ಮವೂ ಸಂವೇದನಾಶೀಲವೂ ಆದ ಸಂಬಂಧಕ್ಕೆ ಒಳಗಾದ. ಕಿರಿಯ ತನಗಿಂತ ಬಹಳ



***Mr. Girish Kasavalli being felicitated by the Chairman of Prabhat Chitra Mandal, Mr. Amol Palekar. Mr. Sadanand Suvarna is in background***

ದೊಡ್ಡವರೂ ಧೂರ್ತರೂ ಆದ ವಿದ್ಯಾರ್ಥಿಗಳ ಉಪಟಳ ಯಮುನಕ್ಕನ ಪ್ರೀತಿಯ ಸೆಳೆತದಲ್ಲಿ ಸಿಕ್ಕು ಇವೆರಡರ ಮಧ್ಯೆ ತೊಳಲುತ್ತಾ ಏನೂ ಅರ್ಥವಾಗದೆ, ಅರ್ಥಮಾಡಿಕೊಳ್ಳುವ ವಯಸ್ಸಲ್ಲದೆ, ನರಳಿದ ಮುಗ್ಧ. ತನ್ನ ಮಗಳಿಗೆ ವರಾನ್ವೇಷಣೆ ಮಾಡಿ ಸಾಕಾದ. ಅಗ್ರಹಾರದ ಬ್ರಾಹ್ಮಣ ವೃದ್ಧ ಉಡುಪರಿಗೆ ಗಂಜಿ ಬೇಯಿಸಲೂ ಮನೆಯಲ್ಲಿ ದಿಕ್ಕಿಲ್ಲದ್ದಕ್ಕಾಗಿ ತನ್ನ ಮಗಳನ್ನು ಮದುವೆ ಮಾಡಿಸಿ ಮತ್ತೊಬ್ಬಯ ಮಾನಳ ಸೃಷ್ಟಿಗೆ ಕಾರಣನಾಗುವ ತಂದೆ.

ಯಮುನ ನಾಣಿಯ ವಿನಃ ಮತ್ತೆಲ್ಲಾ ಪಾತ್ರಗಳೂ, ಧರ್ಮ, ಜಾತಿ, ಸಮಾಜದ ಹೆಸರಿನಲ್ಲಿ ಸ್ತ್ರೀಶೋಷಣೆಯನ್ನು ನಿರಾತಂಕವಾಗಿ ಮಾಡುತ್ತಿರುವುದು ಕಂಡುಬರುತ್ತದೆ. ಸ್ತ್ರೀ ಅಂದು, ಇಂದು, ಎಂದೆಂದೂ ಶೋಷಣೆಗೊಳಗಾಗುತ್ತಿರುವ ವಿಷಯ. ಪ್ರೇಕ್ಷಕರ ಮನ ಕಲಕಿ ವಿಚಾರಕ್ಕೆ ಗುರಿಮಾಡುತ್ತದೆ.

(2) **ಚಿತ್ರ ತಬರನ ಕಥೆ :** ಮನುಷ್ಯತ್ವವಿಲ್ಲದೆ ನೌಕರಶಾಹೀಯ ಬೇಜವಾಬ್ದಾರಿ ವರ್ತನೆಗೆ ಗುರಿಯಾದ ಒಬ್ಬ ಸಾಮಾನ್ಯ ಸರ್ಕಾರಿ ನೌಕರನ ತೊಳಲಾಟ. ಪೆನ್ಷನ್ನಿಗಾಗಿ ಕಾದೂ ಕಾದೂ ಕಾಯಿಲೆ ಬಿದ್ದ ಹೆಂಡತಿಯನ್ನು ಹಣದ ಅಭಾವದಿಂದ ಉಳಿಸಿಕೊಳ್ಳಲೂ ಆಗದ ಹೆಂಡತಿ ಸತ್ತಮೇಲೆ, ಬಂದ ನಿವೃತ್ತಿ ವೇತನವನ್ನ ದಾನ ಮಾಡಿದಾಗ ಸನ್ಮಾನಿಸಲು ಬಂದ ಜನಗಳನ್ನು ಕಂಡು ಎಂತಹ ದುರಂತ ಎಂತಹ ವಿಡಂಬನೆ ! ಎನಿಸುತ್ತದೆ.

(3) ಬಣ್ಣದ ವೇಷ ಯಕ್ಷಗಾನದಲ್ಲಿ ಚಿಲ್ಲರೆ ಪಾತ್ರಗಳನ್ನು ಮಾಡುವ ಶಂಭುವಿನ ಆಕಾಂಕ್ಷೆ ಎರಡನೇ ಪಾತ್ರ (ದೊಡ್ಡ ಪ್ರಮುಖ)ಕ್ಕೆ ಬಣ್ಣದ ವೇಷ ಹಾಕಿ ಜನಗಳಿಂದ ಶಹಬಾಸಿ ಪಡೆಯುವ ಕನಸು ನನಸಾಗದೇ ಕನಸಾಗಿಯೇ ಉಳಿಯುವ ಕಥೆ.

ಎರಡನೆ ಪಾತ್ರ ಮಾಡುವ ಹಿರಿ ನಟನಿಂದ ನಿರಂತರ ಅಪಮಾನಕ್ಕೆ ಗುರಿಯಾಗುವ ಪರಿಸ್ಥಿತಿ ಶಂಭುವಿನದು.

ಶಿವಾಲಯದ ಜೀರ್ಣೋದ್ಧಾರಕ್ಕಾಗಿ ಸ್ಥಳಮಹಾತ್ಮೆ ಶಿವಗಣವಾದ ಜಂಜೂಟಿ ಭೂತದ ಮಹಾತ್ಮೆಯ ಕುರಿತು ಮಹಾಂತರು. ಆಟವಾಡಿಸುವ ಪ್ರಸ್ತಾಪ ಮಾಡಿದಾಗ ಎರಡನೆ ಪಾತ್ರಮಾಡುವ ನಟ ಭೂತನ ಪಾತ್ರ ಮಾಡಲು ನಿರಾಕರಿಸಿದಾಗ ಆ ಪಾತ್ರವನ್ನು ವಹಿಸುವ ಶಂಭು ಹೊಗೆಸೊಪ್ಪಿನ ಪ್ರಖರತೆಯಿಂದ ತಲೆಸುತ್ತಿ ರಂಗದ ಮೇಲೆ ಬಿದ್ದಾಗ ಜಂಜೂಟಿ ಭೂತ ಮೈಮೇಲೆ ಬಂತೆಂದು ಆಟಕಟ್ಟಿ ಮಹಂತ. ಅದನ್ನು ತನ್ನುಪಯೋಗಕ್ಕಾಗಿ ಉಪಯೋಗಿಸಿಕೊಂಡು ಶಂಭು ತನ್ನನ್ನವಮಾನ ಮಾಡುತ್ತಿದ್ದ. ಎರಡನೇ ಪಾತ್ರದ ನಟನನ್ನು ಭೂತದ ನೆವದಿಂದ ಚೆನ್ನಾಗಿ ಹೆದರಿಸಿದಾಗ ನಿಶ್ಚಯವಾಗಿಯೂ ಹೆದರಿದ ನಟ ಅರ್ಧಾಂಗವಾಯುವಿಗೆ ತುತ್ತಾದಾಗ ಶಂಭುವಿನ ಬಗ್ಗೆ ಹಳ್ಳಿಯಲ್ಲಿ ಮೂಡಿದ ಭಯ ಮಿಶ್ರಿತ ಭಕ್ತಿ ಇದನ್ನು ಸುದಪಯೋಗ ಪಡಿಸಿಕೊಂಡ ಮಹಂತ. ದೇವಾಲಯಕ್ಕೆ ಹರಿದು ಬಂದ ಕಾಣಿಕೆ. ದೇವಾಲಯದ ಜೀರ್ಣೋದ್ಧಾರ ಎಲ್ಲವೂ ನಿನ್ನಿಂದ ಆದದ್ದು ಎಂದು ಶಂಭುವನ್ನು ಹೊಗಳಿದಾಗ ಶಂಭು ಬೀಗುತ್ತಾನೆ. ಈ ಮಧ್ಯೆ ಶಂಭುವಿನ ವೈಯಕ್ತಿಕ ಜೀವನಕ್ಕೆ ಅಂಟಿ ತಾಯಿ, ಸಹೋದರಿಯ ಮಗ, ಅವನು ಮೆಚ್ಚಿದ ಹುಡುಗಿ ಜಂಜೂಟಿ ಭೂತದ ಭಯದಿಂದ ಎಲ್ಲರೂ ಇವನಿಂದ ದೂರ ಸರಿದಾಗ ಒಂಟಿಯಾಗಿ ಬೇಸರಕ್ಕೆ ಗುರಿಯಾದ ಶಂಭು ಅನೇಕ ವಿಷಯಗಳಲ್ಲಿ ತನ್ನ ಸ್ವಾತಂತ್ರ್ಯವನ್ನು ಬಲಿಕೊಡುವಂತಾಗುತ್ತದೆ. ಮಹಂತರು ಎಲ್ಲಾ ಜನದ ಜೊತೆ ಸೇರುವುದು ಹೋಟಲಿನಲ್ಲಿ ಕಾಫೀ ಕುಡಿಯುವುದು ಇದೆಲ್ಲಾ ಭೂತಕ್ಕೆ ಕೋಪಬರಿಸುವ ವಿಷಯ ನಿನ್ನನ್ನು ನೋಡಿ ನೋಡಿ ಜನ ನಿನ್ನನ್ನು ಮೆಚ್ಚಿಲ್ಲ ಭೂತದ ಪ್ರಭಾವದಿಂದ ನಿನಗೆ ಗೌರವ ಎಂದು ಮನದಟ್ಟು ಮಾಡಿಸಿದಾಗ ಶಂಭುವಿಗೆ ತನ್ನ ಮೇಲೆ ಜಿಗುಪ್ಸೆ ಮೂಡುತ್ತದೆ. ಮತ್ತೊಂದು ಯಕ್ಷಗಾನದ ತಂಡದೊಂದಿಗೆ ಸ್ಪರ್ಧಿಸಿ ಕುಣಿಯುವಾಗ ಶಂಭುವಿನ ಮಂಡಿನೋವು (ಎಳೆತನದಲ್ಲಿ ಅಡಿಕೆ ಕದ್ದು ಸಾಹುಕಾರ ದುಂಡಿಗೆ ಹೊಡಿದಿದ್ದರ ಪರಿಣಾಮ) ಕಾಣಿಸಿ ಕೆಳಗೆ ಬಿದ್ದು ಇನ್ನು ಮುಂದಿನ 6 ತಿಂಗಳಾದರೂ ಭೂತದ ಪಾತ್ರಕ್ಕೆ ರಜೆ ಬಿದ್ದಾಗ ಶಂಭುವಿಗೆ ದುಃಖವಾಗದೆ ಸಂತಸವೇ ಆಯ್ತು. ಮೊದಲಿನ ಸ್ವಾತಂತ್ರ್ಯದ ಹಕ್ಕಿಯಾಗಿ ಹಾರಾಡಿದ ಶಂಭು....

ಬಣ್ಣದ ವೇಷ ಜನ ಕಾಣುವುದು ಒಂದಾದರೆ ಅದರ ಹಿಂದಿರುವ ನಟನ ಆಶೋತ್ತರಗಳನ್ನೂ ನೋವು ನಲಿವುಗಳ ಚಿತ್ರಣವನ್ನ ಕಾಸರವಳ್ಳಿಯವರು ದಕ್ಷ ನಿರ್ದೇಶನದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ.

ಪ್ರೇಕ್ಷಕನನ್ನು ಆಲೋಚನೆಗೆ ಈಡು ಮಾಡುವ ಅಂಶ ದೇವರ ಬಗ್ಗೆ ಯಾವ ಭಾವನೆ ಇರಬೇಕು? ಪ್ರೇಮವೇ? ಭೀತಿಯೇ? ಅವನು ದಯಾಮಯ ಕ್ಷಮಾಶೀಲನೇ ಇಲ್ಲಾ ಕಾಣಿಕೆ ಕೊಡದವರನ್ನು ಶಿಕ್ಷಿಸುವ ಶಿಕ್ಷಕನೇ ಎನಿಸುತ್ತದೆ.

(4) ಕ್ರೌರ್ಯ ಮಕ್ಕಳೊಂದಿಗೆ ಮಗುವಾಗುವ ವೃದ್ಧೆ ರಂಗಜ್ಜಿ. ನಾನಾ ಮನರಂಜನೆಯ ಕಥೆ ಹೇಳಿ ಮುಗ್ಧ ಮಕ್ಕಳನ್ನು ನಲಿಸಿ ತಾನೂ ಅವರೊಂದಿಗೆ ತನ್ನ ವಯಸ್ಸು ಮರೆತು ನಲಿಯುವವಳು.

ತನ್ನ ಮಗನ ಅಕಾಲ ಮರಣದಿಂದ ತನ್ನ ದೂರದ ಬಂಧು ರಾಜಣ್ಣನ ಮನೆಯ ಆಶ್ರಯಕ್ಕೆ ಹೋದಾಗ ಇವಳಿಗೆ ಅವರ ಮನೆಯಲ್ಲಿ ಸಿಕ್ಕಿದ ಜಾಗ ರೇಷ್ಮೆ ಹುಳುಗಳನ್ನು ಇಡುವ ಜಾಗ. ಊರಿನವರ ಒತ್ತಾಯಕ್ಕೆ ಮುದುಕಿಗೆ ಆಶ್ರಯ ಕೊಟ್ಟ ರಾಜಣ್ಣ, ಕಥೆ ಮಕ್ಕಳ ಸಂಪರ್ಕಕ್ಕೆ ಕತ್ತರಿ ಹಾಕಿದಾಗ ಅವನ ಕಿರಿಯಮಗ ಮೂರ್ತಿ ಕಳ್ಳತನದಿಂದ ಅಜ್ಜಿಯ ಸಂಪರ್ಕವಿಡುತ್ತಾನೆ ಹಿರಿಯಮಗ ಸುಬ್ಬಣ್ಣ ಊರಿಗೆ ಬಂದಾಗ. ತಾನು ಸೋಪಿನ ಏಜನ್ಸಿ ಮಾಡಿ ತುಂಬಾ ಹಣಗಳಿಸಿ ಮನೆಗೂ ಸಹಾಯ ನೀಡುವೆನೆಂದಾಗ ರಾಜಣ್ಣನ ನಿರಾಕರಣೆ. ರಂಗಜ್ಜಿ ದೂರದ ಆಶೆಯನ್ನು ನೆರವೇರಿಸಿಕೊಳ್ಳಲು ಸಹಾಯ ಮಾಡುತ್ತಾಳೆ. ಸ್ವಾತಂತ್ರ ಹೋರಾಟಗಾರನಾದ

ತನ್ನ ಗಂಡನ ಆಪ್ತಮಿತ್ರ ಪದ್ಮನಾಭಯ್ಯ ಬೆಂಗಳೂರಿನಲ್ಲಿ ಗಡಿಯಾರದಂಗಡಿ ಮಾಲೀಕನನ್ನು ಹುಡುಕುವ ಕೆಲಸ ಸುಬ್ಬಣ್ಣನಿಗೆ ಹಚ್ಚುತ್ತಾಳೆ.

ಸುಬ್ಬಣ್ಣನಿಗೆ ಧನಸಹಾಯ ಮಾಡಿದ್ದರಿಂದ ರಾಜಣ್ಣ ಮತ್ತವನ ಕುಟುಂಬ ರಂಗಜ್ಜಿಗೆ ಕೊಂಚ ಸಡಿಲ ಬಿಡುತ್ತಾರೆ. ಸುಬ್ಬಣ್ಣ ಯಾರ ಆಶೋತ್ತರಗಳನ್ನು ಈಡೇರಿಸದೆ ಕಳಿಸುವ ಹಣವನ್ನು ಕಳಿಸದಿದ್ದಾಗ ಸಾಲದ ಕಂತು ಕಟ್ಟಲು ಮತ್ತೊಮ್ಮೆ ರಾಜಣ್ಣನ ಹೆಂಡತಿ ರಂಗಜ್ಜಿಯನ್ನು ಧನಸಹಾಯಕ್ಕೆ ಕೇಳಿದಾಗ ರಂಗಜ್ಜಿ ನಿರಾಕರಿಸುತ್ತಾಳೆ. ಸಡಿಲ ಬಿಟ್ಟದ. ಕುಟುಂಬ ಮತ್ತೊಮ್ಮೆ ಬಿಗಿಯಾಗುತ್ತದೆ. ಸುಬ್ಬಣ್ಣನನ್ನು ನಿಯಂತ್ರಿಸಲು ಮೂರ್ತಿಜೊತೆ ಮಾಡಿ ರಂಗಜ್ಜಿಯನ್ನು ಬೆಂಗಳೂರಿಗೆ ಸಾಗಹಾಕುತ್ತಾನೆ. ರಾಜಣ್ಣ. ಏನೂ ಅರಿಯದ ಹಸುಳೆ ಮೂರ್ತಿ. ಅಜ್ಜಿಯೊಂದಿಗೆ ಬಂದಿಳಿದಾಗ ಸುಬ್ಬಣ್ಣ 'ಈ ಸಾಯುವ ಮುದುಕಿಯನ್ನೇಕೆ ಕರೆತಂದೆ' ಎಂದು ಸಿಡಿಮಿಡಿ ಗುಟ್ಟುತ್ತಾನೆ. ಪದ್ಮನಾಭಯ್ಯನನ್ನು ಹುಡುಕುವ ಕಾರ್ಯ ರಂಗಜ್ಜಿ ಮೂರ್ತಿಯೊಂದಿಗೆ ಸಾಗಿಸುತ್ತಾಳೆ. ಒಂದು ಗಡಿಯಾರದ ಅಂಗಡಿಗೆ ಹೋಗಿ ಪದ್ಮನಾಭಯ್ಯನವರ ಚಹರೆ. ಸ್ವಾತಂತ್ರ್ಯ ಹೋರಾಟಗಾರರು ತನ್ನ ಗಂಡನ ಮಿತ್ರರೆಂದು ವರ್ಣಿಸಿದಾಗ ಗಡಿಯಾರದಂಗಡಿಯವರು ಮುದುಕಿಗೆ ಕನ್ನಡಿ ಮುಖಕ್ಕೆ ಹಿಡಿದು. ನಿನಗೆ ಇಷ್ಟು ವಯಸ್ಸಾಗಿದೆ ಇನ್ನು ನಿನ್ನ ಗಂಡನ ಸ್ನೇಹಿತರೆಂದ ಮೇಲೆ ಅವರಿರಲೇ ಸಾಧ್ಯವಿಲ್ಲವೆಂದಾಗ ರಂಗಜ್ಜಿಯ ದೂರದ ಆಸೆಯೂ ಕಮರಿದಾಗ ನಿರಾಶೆಯಿಂದ ಖಾಯಿಲೆ ಬೀಳುತ್ತಾಳೆ ಖಾಯಿಲೆ ಬಿದ್ದ ರಂಗಜ್ಜಿ ಇಲ್ಲೇ ಸತ್ತರೆ ಎಂದೂ ಗಾಬರಿಯಾಗಿ ಸುಬ್ಬಣ್ಣ ರೈಲಲ್ಲಿದ್ದಕ್ಕೆ ಲಾರಿಯಲ್ಲೇ ಸಾಗಹಾಕುತಾನೆ. ಖಾಯಿಲೆ ರಂಗಜ್ಜಿ ಕುರಿ ಕೋಳಿ ತುಂಬಿದ ಲಾರಿಯಲ್ಲಿ ಏಳಲಾರದೆ ಪ್ರಯಾಣ ಮಾಡುವಾಗ ಕುರಿ ಕೋಳಿ ತುಂಬಿಕೊಂಡು ಸಾಗಿಸುತ್ತಿದ್ದ ರೈತರಿಗೆ ಜಗಳ ಹತ್ತಿ ಅವಳ ಮೇಲೆ ಬಿದ್ದು ಅವಳನ್ನು ಅರೆಜೀವ ಮಾಡುತ್ತಾರೆ. ಲಾರಿ ಡ್ರೈವರ್ ಮುದುಕಿ ಲಾರಿಯಲ್ಲಿ ಸತ್ತರೆ ಎಂದು ಹೇಳಿ ಮಧ್ಯದಲ್ಲಿ ಮೂರ್ತಿಯನ್ನಿಳಿಸಿ ಜೇಬಿಗೆ ಒಂದಿಷ್ಟು ದುಡ್ಡು ತುಂಬಿ ಮುದುಕಿಯನ್ನು ಎತ್ತಿ ತಂದು ಒಂದು ಜಗುಲಿಯ ಮೇಲೆ ಮಲಗಿಸಿ ಪರಾರಿಯಾಗುತ್ತಾರೆ. ಹಳ್ಳಿಯ ಪೋಲೀಸರು ಸಹಾಯ ಮಾಡಲು ಬಂದು ಎಳೆ ಹುಡುಗ ಮೂರ್ತಿಯನ್ನು ದಯೆಕರುಣೆಯಿಂದ ಕಾಣದೆ 'ಏನಾದರೂ ಸಾಂಚಾರಿ ಮಾಡಿದರೆ ಒದ್ದು ಒಳಗ್ಹಾಕುವೆ' ಎಂದು ಪೋಲೀಸ್ ಭಾಷೆ ಉಪಯೋಗಿಸಿದಾಗ ಹೆದರಿದ ಮೂರ್ತಿ ದಿಕ್ಕೆಟ್ಟು ಓಡುತ್ತಾನೆ, ಓಡುತ್ತಾನೆ... ರಂಗಜ್ಜಿಯಂತಹ ಹಾಲು ಮನಸ್ಸಿನ ಮುದುಕಿಯೊಂದಿಗೆ ರಾಜಣ್ಣನ ಮನೆ ಸೇರಿದಾಗಿನಿಂದಾಗುವ ಕ್ರೌರ್ಯ ನಮ್ಮ ಸಮಾಜದ ಹಿರಿಯ ಜೀವಿಗಳ ಧಾರುಣ ಜೀವನದ ಚಿತ್ರಣ ನೀಡುತ್ತದೆ. ಹಿಂದೆ ಅವಿಭಕ್ತ ಕುಟುಂಬದಲ್ಲಿ ವೃದ್ಧರು ಸುರಕ್ಷಿತೆಯಿಂದಿರುತ್ತಿದ್ದರು. ಅವಿಭಕ್ತ ಕುಟುಂಬ ಮರೆಯಾಗುತ್ತಿರುವ ಇಂದು ನಮ್ಮ ವೃದ್ಧರು ವೃದ್ಧಾಶ್ರಮ ಹಿಡಿಯಬೇಕೇ? ಎಂಬ ವಿಚಾರ ಆತ್ಮಾವಲೋಕನ ಮಾಡಿಕೊಳ್ಳುವಂತಾಗುತ್ತದೆ.

**(4) ತಾಯಿ ಸಾಹೇಬಾ :** ಭಾರತೀಯ ಸಮಾಜದಲ್ಲಿ ಸ್ತ್ರೀಗೆ ಸ್ವಾತಂತ್ರವಿಲ್ಲ. ಅದರಲ್ಲೂ ಹೊಸಿಲು ದಾಟದ ಶ್ರೀಮಂತ ಮಹಿಳೆಗೆ ? ತಾಯಿ ಸಾಹೇಬಾ. ಮಾನವೀಯತೆಗಾಗಿ ಈ ಕಟ್ಟಳೆಯನ್ನು ಮಾರಿದ ಅದ್ವಿತೀಯ ಮಹಿಳೆ, ತನ್ನ ಗಂಡನ ಅನೈತಿಕ ಸಂಬಂಧಕ್ಕೆ ಹುಟ್ಟಿದ ಮಗಳನ್ನ ತನ್ನ ಮತ್ತು ತನ್ನ ಗಂಡನ ದತ್ತೂ ಪುತ್ರ ಪ್ರೇಮಿಸಿದಾಗ ಅವನ ಜೀವನ. ಈ ಪ್ರೇಮ ಪ್ರಕರಣದಿಂದ ಹಾಳಾಗದಂತೆ ತಡೆದು ಗಂಡನ ಮರಣಾನಂತರ ತನ್ನ ಗಂಡ ಮಾಡಿಕೊಂಡ ದತ್ತುವನ್ನು ರದ್ದು ಪಡಿಸಲು ಸುಳ್ಳು ಕಾಗದ (Forgery) ಮಾಡಿ ಕಾನೂನನ್ನು ಮುರಿದಳು. ಮನೆ ನಾಲ್ಕು ಗೋಡೆಯಿಂದಾಗುವುದಿಲ್ಲ ಮನೆಯಲ್ಲಿ ವಾಸಿಸುವ ಜನಗಳ ಮನದ ಬೆಸುಗೆಯಿಂದಾಗುತ್ತದೆ ಎಂದು ಅನುಭವದಿಂದ ಕಂಡುಂಡ ಮಹಿಳೆ. ಭಾರತಕ್ಕೆ ಸ್ವಾತಂತ್ರ ಬಂದ ತರುಣದಲ್ಲಿ ಅಸ್ವಾತಂತ್ರಳಾದ ಹೆಣ್ಣು ಸಂಪ್ರದಾಯದ ಸಂಕೋಲೆಯನ್ನು ಮಾನವೀಯತೆಗಾಗಿ ಧೈರ್ಯದಿಂದ ಮುರಿದ ಕಥೆ. ಕಾಸರವಳ್ಳಿಯವರ ದಕ್ಷ ನಿರ್ದೇಶನದಡಿಯಲ್ಲಿ ಅಮಾನವೀಯ ಮೌಲ್ಯಗಳನ್ನೊಳಗೊಂಡ, ಸಮಾಜವನ್ನೂ ಅದರ ಕಟ್ಟುಕಟ್ಟಲೆಗಳನ್ನೂ, ನಮ್ಮ ದೇವರುಗಳು ಹಾಗೂ ಧರ್ಮವನ್ನು ಮಾನವೀಯತೆಯ ಮೌಲ್ಯಗಳ ದೃಷ್ಟಿಯಿಂದ ನೋಡುವ ಆತ್ಮಾವಲೋಕನ ಮಾಡಿಕೊಳ್ಳಲು ಪ್ರೇರೇಪಿಸುವ ಚಿತ್ರಗಳನ್ನು ನೋಡುವ ಅವಕಾಶ ಮುಂಬೈ ಕನ್ನಡಿಗರಿಗೆ ದೊರೆತಿತ್ತು. ಈ 5 ದಿನಗಳ ಉತ್ಸವ ಅನೇಕ ಪ್ರೇಕ್ಷಕರನ್ನು ಆಕರ್ಷಿಸಿತ್ತು. ಕೆಲವು ಚಿತ್ರಗಳಿಗೆ Subtitling ಇರಲಿಲ್ಲವಾದ್ದರಿಂದ ಗಿರೀಶ ಕಾಸರವಳ್ಳಿಯವರು ತಾವೇ Para dubbing ಮಾಡಿದರು

— ರಮಾ ಕೃಷ್ಣ

# MATRIMONIAL

Alliance invited for Kannada Madhwa Brahmin Girl 25 years. B.Com. (First Class) DIP in Computers, Pursuing DIP in Business Management. Employed in Japanese multinational, Bombay. Ht. 155cm, Fair convented Punavasu III pada, Mithuna Rasi, Sounaka Gotra. Having passport ready to settle in USA. Elder Brother married settled in USA. From Boys upto 31 years Ht. 5'.10" Post Graduate working in multinational in Bombay or Bangalore or USA. Apply Box No. 171.

***

Alliance invited for 23 years old girl, 5ft. Fair complexion belonging to Arya Vysya caste. B.Com. with Computer knowledge. Star Pubba, Gotra Channishetla. The boy should be preferably a graduate belonging to same caste. Apply Box No. 172.

***

Alliance invited for smartha Brahmin girl 23 year age, Fair complexion 5ft. Height. B.Com. graduate, Bharadwaj Gotra, Ashwini Nakshatra. Running Computer Institute. Boy should be preferably 27 years age well qualified, of same caste, from respected family. Apply Box No. 173 or contact Tel.: 911-475243

***

Wanted a slim, smart and good looking graduate girl of about 23 years or younger. Minimum 5'3" for a fair and handsome Caption in the Indian Army. Boy is B.Sc. commissioned through NDA and IMA. He is 5'-7.5". Atreya Gothra Ashwinini Stat, II Pada Brahmin. Father us retired colonel from Indian Army. Girl. Girl can be from any Brahmin community but vegetarian. Contact 080-6636651 (Bangalore), 8386338 - Kiran Seshadri 7p.m. to 10-00 p.m.

# ಗಿರೀಶ್ ಕಾಸರವಳ್ಳಿ

ಸಂದರ್ಶಕರು : ಪ್ರಸಾದ್, ಕೆ. ಮಂಜುನಾಥಯ್ಯ

ಮುಂಬೈಯಲ್ಲಿ ಜುಲೈ 19ರಿಂದ 23ರ ವರೆಗೆ ಗಿರೀಶ್ ಕಾಸರವಳ್ಳಿಯವರ ಚಿತ್ರಗಳ ಉತ್ಸವವನ್ನು ಏರ್ಪಡಿಸಲಾಗಿತ್ತು. ಈ ಉತ್ಸವಕ್ಕೆ ಬಂದಿದ್ದ ಗಿರೀಶ್ ಅವರನ್ನು ನಾವು ನೇಸರುವಿಗಾಗಿ ಸಂದರ್ಶಿಸಿದೆವು. ಅದರ ಕೆಲವು ಆಯ್ದ ಅಂಶಗಳು.

ನೇಸರು : ನಿಮ್ಮ ಚಿತ್ರಗಳಲ್ಲಿ ನೋಟ, ಸಂಗೀತ ಬಹಳ ಸುಂದರವಾಗಿರುತ್ತೆ. ನಿಮಗೆ ಮತ್ಯಾವ ಕಲಾ ಮಾಧ್ಯಮಗಳಲ್ಲಿ ಅಭ್ಯಾಸ ಅಥವಾ ಆಸಕ್ತಿ ಇದೆ ?

ಗಿರೀಶ್ : ನನಗೆ Painting ಆಗಲೀ, ಸಂಗೀತವಾಗಲೀ, ಏನೂಗೊತ್ತಿಲ್ಲ. ಆದರೆ ಇಂಪಾದ ಸಂಗೀತವನ್ನ ಗುರುತಿಸಬಲ್ಲೆ, ಇದು ಈ ರಾಗಾಂದ್ರೆ ನನಗೆ ಗೊತ್ತಾಗೋಲ್ಲ. ಅಲ್ಲದೆ, it matters little to me. ಸಂಗೀತ, ಆ ಸಂದರ್ಭಕ್ಕೆ, moodಗೆ ಸರಿಯಾಗಿರಬೇಕು. ಕೆಲವು ಸಲ ಅವರು ಕಂಪೋಸ್ ಮಾಡಿರೋದು ಒಪ್ಪಿಗೆ ಆಗ್ದೇ ಇದ್ರೆ, ಇನ್ನೊಂದು alternative piece ತಯಾರಾಗಿಡಿ ಅಂತ ಹೇಳ್ತೀನಿ. ಆಮೇಲೆ ಅವೆರಡರಲ್ಲಿ ಯಾವುದು ಸರಿ ಅನ್ನಿಸುತ್ತೋ ಅದನ್ನ Select ಮಾಡ್ತೀನಿ.

ನನ್ನ Photographers ಗೂ ನನಗೂ ಬಹಳ ಒಳ್ಳೆಯ under standing ಇದೆ. ನಾನು sceneನ ವಿವರಿಸಿ ಹೇಳಿದ್ರೆ ಸಾಕು, ಅವ್ರು ಅದೇ ರೀತಿ ಚಿತ್ರಾ ತೆಗೀತಾರೆ.

ನೇಸರು : ನೀವು ನಿಮ್ಮ ಚಿತ್ರಗಳಿಗೆ subjectನ ಹೇಗೆ ಆಯ್ದು ಕೊಳ್ತೀರ ?

ಗಿರೀಶ್ : ನಾನು ಬಹಳ ಓದ್ತೀನಿ. ಸ್ನೇಹಿತರು, ಸಹೋದ್ಯೋಗಿಗಳು ಯಾವುದಾದರೂ Interesting subject ಇದೇಂದ್ರೆ, ಹೇಳ್ತಾರೆ. ನಮ್ಮ ಸುತ್ತಲೂ ಆಗ್ತಿರೋದನ್ನ ಗಮನಿಸ್ತೀನಿ. ಯಾವುದೋ ಒಂದು ವಿಷಯ, ಒಂದು ಪ್ರತಿಮೆನ (Imageನ) ಮನಸ್ಸಿನಲ್ಲಿ ಮೂಡಿಸುತ್ತೆ. ಅದನ್ನ ಬೆಳೆಸಿದೊಡ್ಡದು ಮಾಡಬಹುದು ಅಂತ ಅನ್ನಿಸುತ್ತೆ. ಆಗ ಅದನ್ನ ನಾನು ಆರಿಸ್ಕೋಳ್ತೀನಿ. ಇದ್ರಲ್ಲಿ, ವಿಷಯ ನನ್ನ ಮನಸ್ಸಿಗೆ Impress ಮಾಡಿದ್ದು ಮುಖ್ಯ ಅಲ್ಲ. ಅದು ಅದೇ ರೀತಿ ಇನ್ನೂ ಅನೇಕರಿಗೂ impress ಮಾಡುತ್ತೆ ಅನೋದು ಮುಖ್ಯ. ಆಗ ಅದು ಚಿತ್ರೀಕರಣಕ್ಕೆ suitable ವಿಷಯವಾಗುತ್ತೆ. ಆ ಚಿತ್ರಾನ ಬೆಳೆಸಿ ದೊಡ್ಡದು ಮಾಡ್ತಾ ಹೋಗಬಹುದು. Commercial filmನಲ್ಲಿ ಒಂದು ಕಥೆನೋ, theme ಅನ್ನೋ ಮೊದಲು ಆಯ್ದು ಕೊಂಡು ಆಮೇಲೆ ಅದನ್ನ ಹೇಗೆ ಚಿತ್ರೀಕರಿಸೋದು ಅಂತನೋಡ್ತಾರೆ. ಆದ್ರೆ, Film Instituteನಲ್ಲಿ ತಯಾರಾದ ನಾವು, ಮೊದಲು ಒಂದು ಪ್ರತಿಮೆ (image)ನ ತಯಾರು ಮಾಡ್ಕೋತ್ತೇವೆ. ಆಮೇಲೆ ಅದನ್ನ ಬೆಳೆಸ್ತಾ ಹೋದಂತೆ theme ಬೆಳ್ಕೋತಾ ಹೋಗುತ್ತೆ.

Exampleಗೆ ನೋಡಿ, T.N. Seetharam ಅವರು 'ಶೌರ್ಯ' ಕಥೆಯನ್ನು ಹೇಳ್ತಿದ್ದಾಗ, ಅದು trainನಲ್ಲಿ ಆಗೋ ಕಥೆ, ಹೇಗೆ ಚಿತ್ರೀಕರಿಸೋದು ಸಾಧ್ಯ ಅಂತಅನ್ನಿಸ್ತಿತ್ತು. ಆದರೆ, ಕೊನೆಯಲ್ಲಿ ಆ ಹುಡುಗ ಎಲ್ಲಾ ಬಿಟ್ಟು ಓಡಿಹೋಗ್ತಾನೆ ಅಂದಾಗ, ಮನಸ್ಸಿನಲ್ಲಿ ಒಂದು Image ಮೂಡಿ ಬಂತು. ಸ್ವಲ್ಪ ಬದಲಾವಣೆಗಳನ್ನು ಮಾಡಿದರೆ ಇದನ್ನ ಚಿತ್ರೀಕರಿಸಬಹುದು ಅನ್ನಿಸಿತು. ಅದನ್ನ ಸೀತಾರಾಮುವರಿಗೆ ತಿಳಿಸಿದೆ. ಅವರೂ ಅದಕ್ಕೆ ಒಪ್ಪಿದರು. 'ಶೌರ್ಯ' ತಯಾರಾಯಿತು. ಇದೇ ರೀತಿ, 'ತಾಯಿ ಸಾಹೇಬಾ' ತಯಾರಿಸುವ ಸಮಯದಲ್ಲಿ, ಜಮೀನುದಾರ ಮನೆತನದಲ್ಲಿ ಉಪಯೋಗಿಸುವ ಅಲಂಕಾರದ ಬಗ್ಗೆ ಮಾತು ಬಂದಾಗ, ಅತ್ತರ್‌ನ ಉಪಯೋಗ ಹೇಗೆ ಸಾಂಕೇತಿಕ ಎಂಬ ವಿಷಯವೂ ಬಂತು. ಆದರೆ ಅದನ್ನು ಉಪಯೋಗಿಸುವಾಗ ನಾನು ಬರೀ ಸಾಂಕೇತಿಕವಾಗಿ ಉಪಯೋಗಿಸದೆ ಅದನ್ನು ಕಥೆಯ ಒಂದು ಅಂಶವಾಗಿ ಉಪಯೋಗಿಸಿದ್ದೇನೆ.

Imagery is important because art communicates in a subliminal way and not as one to one communication.

ಮತ್ತೆ ಇನ್ನೊಂದು ಮುಖ್ಯವಾದ ವಿಷಯ ಏನೊಂದ್ರೆ, telling some thing as you feel it and not watering it down as many would perhaps like to hear it.

ನೇಸರು : ಈ ರೀತಿಯ ಕಲಾತ್ಮಕ ಚಿತ್ರಗಳು ಯಾಕೆ ಯಶಸ್ವಿಯಾಗೋದಿಲ್ಲ ?

ಗಿರೀಶ್ : Commercial ಆಗಿ ಯಶಸ್ವಿಯಾಗೋದಕ್ಕೆ ನಮ್ಮ Industryಯ distributor / exhibition systemನಲ್ಲಿ ಕಷ್ಟ. ಇದರಲ್ಲಿ ಯಾವುದೇ ಚಿತ್ರಕ್ಕೆ release ಆದ ಮೊದಲನೇ ವಾರದಲ್ಲಿ ಶೇ. 80ರಷ್ಟು ಟಿಕೆಟ್ಟಿನ ಮಾರಾಟವಾಗದಿದ್ದರೆ ಅದನ್ನು ಆ ಥಿಯೇಟರಿನಿಂದ ತೆಗೆದು ಬಿಡುತ್ತಾರೆ. Commercial ಚಿತ್ರಗಳಿಗೂ ಮತ್ತೆ ಕಲಾತ್ಮಕ ಚಿತ್ರಗಳಿಗೂ ನೋಡುವ ಪ್ರೇಕ್ಷಕರೇ ಬೇರೆ ಬೇರೆ. ಈ ಚಿತ್ರಗಳಿಗೆ ಜನ ಹೋಗೋದಿಲ್ಲಾಂತ ಅಲ್ಲ. ಆದರೆ 800 ಅಥವಾ 1000 ಜನಹಿಡಿಸುವ ದೊಡ್ಡ ಥಿಯೇಟರ್‌ನಲ್ಲಿ ಶೇ. 80ರಷ್ಟು ತುಂಬೊ ಹಾಗೆ ಜನ ಸೇರಬೇಕು. ಅಂದ್ರೆ, ಅದು ಸಾಧ್ಯವಿಲ್ಲ. ಚಿಕ್ಕ 200 ಸೀಟಿನ ಥಿಯೇಟರ್‌ಗಳಿದ್ದರೆ ಅವು ಶೇ 80ರಷ್ಟು ತುಂಬಬಹುದು. ಆದರೆ ನಮ್ಮಲ್ಲಿ ಆ ರೀತಿಯ ಚಿಕ್ಕ ಥಿಯೇಟರ್‌ಗಳಿಲ್ಲ.

ನೇಸರು : NFDCಯನ್ನು ಸ್ಥಾಪಿಸಿದ್ದೇ ಈ ರೀತಿಯ ಚಿತ್ರಗಳಿಗೆ ಹಂಚಿಕೆ ಹಾಗೂ Exhibitionನಲ್ಲಿ ನೆರವಾಗುವುದಕ್ಕೆ ಅಲ್ಲವೇ ?

ಗಿರೀಶ್: NFDC ಈ ರೀತಿಯ ಚಿತ್ರಗಳ ತಯಾರಿಕೆ ಹಾಗೂ ಹಂಚಿಕೆಯಲ್ಲಿ ನೆರವು ಕೊಡ್ತಾ ಇದೆ. ಆದರೆ ಅವುಗಳ ಪ್ರದರ್ಶನಕ್ಕೆ ಅವರಲ್ಲಿ ಥಿಯೇಟರ್ ಇಲ್ಲ. Theatre is very expensive ನಮ್ಮ ದೇಶ ಬಹಳ ದೊಡ್ಡದು. ಆದರಲ್ಲಿ ಅವರು ಎಲ್ಲೆಲ್ಲೀಂತ theatre provide ಮಾಡೋಕ್ಕಾಗುತ್ತೆ.

ನೇಸರು : ಈ ರೀತಿಯ ಚಿತ್ರಗಳ ನಿರ್ಮಾಪಕರು / ನಿರ್ದೇಶಕರು ಒಟ್ಟಿಗೆ ಸೇರಿ ಈ ಸಮಸ್ಯೆನ ಬಗೆಹರಿಸುವುದಕ್ಕೆ ಪ್ರಯತ್ನ ಪಟ್ಟಿದ್ದೀರ ?

ಗಿರೀಶ್ : ಪ್ರಯತ್ನಗಳು ನಡೀತಾ ಇವೆ. ಚಿಕ್ಕದಾದ ಥಿಯೇಟರ್ ಪ್ರದರ್ಶನಕ್ಕೆಬೇಕು. ಆದರೆ ನಾನು ಆಗಲೇ ಹೇಳಿದ್ದಾಗೆ ಥಿಯೇಟರ್ ಬಹಳ expensive. ಅದೂ ಅಲ್ಲದೆ ನಮ್ಮಲ್ಲಿ ಅನೇಕ ಪ್ರಾಂತ್ಯಗಳು, ವಿವಿಧ ಭಾಷೆಗಳು ಇವೆ. ಎಷ್ಟೂಂತ ಇವನ್ನ ಒದಗಿಸೋಕ್ಕಾಗುತ್ತೆ.

ನೇಸರು : ನಿಮ್ಮ ಮತ್ತು ನಿಮ್ಮ ಚಿತ್ರಗಳ ಆರ್ಥಿಕ ಯಶಸ್ಸಿನ ಬಗ್ಗೆ ನಿಮಗೆ ತೃಪ್ತಿಯಾಗಿದೆಯೇ?

ಗಿರೀಶ್ : ವೈಯಕ್ತಿಕವಾಗಿ, ನನ್ನ ಬಗ್ಗೆ ಹೇಳಬೇಕಾದರೆ, ನಾನು ನನ್ನ ಜೀವನಕ್ಕೆ ಈ ವೃತ್ತಿಯನ್ನು ನಂಬಿಕೊಂಡಿಲ್ಲ. ನಾನು ಜಮೀನುದಾರ ಮನೆತನಕ್ಕೆ ಸೇರಿದವನು. 'ಘಟಶ್ರಾದ್ಧ'ದಲ್ಲಿ ತೋರಿಸಿರುವ ಮನೆ ನಮ್ಮ ಮನೆ. ಆದ್ದರಿಂದ ವೈಯಕ್ತಿಕವಾಗಿ ಈ ವಿಷಯದಲ್ಲಿ ನನಗೇನೂ Complaints ಇಲ್ಲ. ಆದರೆ ಈ ಚಿತ್ರಗಳಿಗೆ Producer invest ಮಾಡಿರುವ ಹಣ ಕೂಡ ಹಿಂತಿರುಗಿ ಬಂದಿಲ್ಲ. ಅವರು ಈ ಚಿತ್ರಗಳಿಂದ ಲಾಭ ಬರುತ್ತೇಂತ expect ಮಾಡದೇ ಇರಬಹುದು. ಆದ್ರೂನೂ ಅವಕ್ಕೆ invest ಮಾಡಿದ ಹಣ collect ಆದ್ರೆ ಇನ್ನೊಂದು ಚಿತ್ರದಲ್ಲಿ invest ಮಾಡಬಹುದು.

ಕೆಲವು ವರ್ಷಗಳ ಹಿಂದೆ, ದೂರದರ್ಶನದವರು ಈ ರೀತಿಯ, ರಾಷ್ಟ್ರೀಯ ಪುರಸ್ಕಾರ ಪಡೆದ ಚಿತ್ರಗಳನ್ನು

TVಯಲ್ಲಿ premier show ಮಾಡಿ ಅದಕ್ಕೆ 8 ಲಕ್ಷ ಕೊಡುತ್ತಿದ್ದರು. ಆಗ 'ತಬರನ ಕಥೆ'ಯನ್ನು ಈ ರೀತಿ ತೋರಿಸಿದ್ದರಿಂದ ಅದರ investment ಹಿಂತಿರುಗಿ ಬಂತು. ಆದರೆ ಇಂದಿಗೆ 8 ಲಕ್ಷದಲ್ಲಿ ಚಿತ್ರತೆಗೆಯುವ ಖರ್ಚು ಪೂರೈಸುವುದಿಲ್ಲ. 'ತಾಯಿ ಸಾಹೇಬಾ'ಗೆ ಸುಮಾರು 40 ಲಕ್ಷದಷ್ಟು ಖರ್ಚಾಗಿದೆ.

**ನೇಸರು** : ನಿಮ್ಮ ಹೆಚ್ಚು ಪಾಲಿನ ಚಿತ್ರಗಳಲ್ಲಿ ನಟನಟಿಯರು ಹೊಸಬರು ಅಥವಾ ಹೆಚ್ಚು ಪರಿಚಯವಿಲ್ಲದವರು. ಇವರನ್ನು ನೀವು ಹೇಗೆ ಹುಡುಕತ್ತೀರ?

**ಗಿರೀಶ್** : ಮಕ್ಕಳ ವಿಷಯ ಹೇಳ್ತೀನಿ. ಚಿತ್ರದಲ್ಲಿ ಮಕ್ಕಳ ಪಾತ್ರ ಇದೇಂದ್ರೆ, ನನ್ನ friendsಗೆ, ಸಹೋದ್ಯೋಗಿಗಳಿಗೆ ಎಲ್ಲರಿಗೂ ಹೇಳ್ತೀನಿ. ಎಲ್ಲರೂ ತಮಗೆ ತಿಳಿದವರಿಗೆ ಹೇಳಿ ಮಕ್ಕಳನ್ನ ಸೇರಿಸ್ತಾರೆ. ಅವರು ಬಂದಾಗ ನಾನು ಮುಖ್ಯವಾಗಿ ಎರಡು ಅಂಶಾನ ನೋಡ್ತೀನಿ :

1) ಆ ಮಗು ಕಣ್ಣು bright ಆಗಿರಬೇಕು.

2) ಆ ಮಗೂಗೆ ಒಳ್ಳೆ ನಗು ಮುಖ ಇರಬೇಕು.

ಇವೆರಡೂ ಆದಮೇಲೆ, ಸ್ವಲ್ಪ ತುಂಟತನ ಇರಬೇಕು. ತುಂಟತನ ಇರೋ ಮಗು ಹತ್ತಿರ act ಮಾಡಿಸೋದು ಸುಲಭ. ಆದರೆ ಮಕ್ಕಳನ್ನ ಕರೆಕೊಂಡು ಬರೋವಾಗ ಅದರ ತಂದೆ ತಾಯಿ ಆ ಮಗೂಗೆ ಗಂಭೀರವಾಗಿರು, ಹೀಗೆ ಮಾಡ್ಬೇಡಾ, ಹಾಗೆ ಮಾಡ್ಬೇಡಾಂತ, ತುಂಬಾ instructions ಕೊಟ್ಟಿರುತ್ತಾರೆ. ಆದ್ದರಿಂದ ಆ ಮಗು free ಆಗಿರೋಲ್ಲ. ಅದಕ್ಕೆ ನಾನು ಅವರನ್ನೆಲ್ಲಾ ಒಂದು ಜಾಗದಲ್ಲಿ ಬಿಟ್ಟು ಏನೋ ಕೆಲಸದಲ್ಲಿ ಹೊರಗೆ ಹೋದಂತೆ ಸ್ವಲ್ಪ ಹೊತ್ತು ಹೊರಗೆ ಹೋಗ್ತೇನೆ. ನನ್ನ assistants ಅಲ್ಲಿ ಇರ್ತಾರೆ. ಏನೋ ಕೆಲಸದಲ್ಲಿ ಮಗ್ನರಾಗಿರೋತರಹ ತೋರಿದರೂ ಅವರು ಈ ಮಕ್ಕಳನ್ನ observe ಮಾಡ್ತಾ ಇರ್ತಾರೆ. ಸ್ವಲ್ಪ ಹೊತ್ತಾದ ಮೇಲೆ ಮಕ್ಕಳು free ಆಗಿ ಅವರವರ normal behaviourಗೆ ಬರ್ತಾರೆ. ಅದನ್ನ Observe ಮಾಡ್ತಿರೊ ನನ್ನ assistants ಅದನ್ನ ನನಗೆ report ಮಾಡ್ತಾರೆ. ಆಮೇಲೆ ನಾನು selectionನ finalise ಮಾಡ್ತೇನೆ.

ಮಕ್ಕಳ ಹತ್ರ act ಮಾಡಿಸೊವಾಗಲೂ ಅಷ್ಟೆ, ಬಹಳ sensitive ಆಗಿ handle ಮಾಡ್ಬೇಕು. ನಾನು ಯಾವಾಗ್ಲೂ ಅವರಿಗೆ sceneನಲ್ಲಿ ಬರೇ emotionsನ ಹೇಳ್ತೀನಿ. ನಿನಗೆ ತುಂಬಾ ಕೋಪ ಬರುತ್ತೆ, ತುಂಬ ದುಃಖ ಆಗುತ್ತೆ, ಈ ರೀತಿ. ಆಗ ಅವರು ಅದಕ್ಕೆ ಸರಿಯಾಗಿ respond ಮಾಡ್ತಾರೆ. shooting timeನಲ್ಲಿ ಅವ್ರನ್ನ ಎಲ್ಲರೆದುರಿಗೂ critisize ಮಾಡ್ಬಾರದು. ಏನಾದ್ರೂ ತಪ್ಪಾದ್ರೂ ಅದನ್ನ ಆ ಮಗೂನ ಹತ್ತಿರ ಕರೆದು ಹೇಳ್ಬೇಕು. They are quite sensitive to these things.

**ನೇಸರು** : ನೀವು ಚಿತ್ರ ತಯಾರಿಸುವಾಗ Planning ಮತ್ತು Paper workಗೆ ಎಷ್ಟು ಪ್ರಾಧಾನ್ಯ ಕೊಡ್ತೀರಾ? ಏನೆಲ್ಲಾ ಬರೆದು ಖಚಿತ ಪಡಿಸಿಕೊಳ್ತೀರಾ? ಒಂದು ಕಿರುಪರಿಚಯ ಕೊಡ್ತೀರಾ?

**ಗಿರೀಶ್** : Planning & paper work is very important. ನಾನು ಆದಷ್ಟು ವಿವರಗಳನ್ನು ಬರೆದು ಖಚಿತ ಪಡಿಸಿಕೊಳ್ತೀನಿ. ಸಾಮಾನ್ಯವಾಗಿ ನಾನು sceneನ ಬರೆಯೋವಾಗ ಅದರಲ್ಲಿ ಎಲ್ಲಾ ವಿವರಣೆಯನ್ನೂ ಬರೆಠೀನಿ. ಒಂದು ಸಲ ಒಬ್ಬರು ನನ್ನ script ಓದಿ 'ನೀವು ನಾಳೆ shootingಗೆ ಬರೋಲ್ವೇ' ಅಂತ ಕೇಳಿದ್ರು. ಬರ್ತಿದ್ದೀನಲ್ಲ ಯಾಕೇ?' ಅಂದೆ. ಅದಕ್ಕೆ ಅವ್ರು 'ಇಲ್ಲಾ ಇಷ್ಟೆಲ್ಲಾ detail ಆಗಿ Camera position, entry, exit ಎಲ್ಲಾ ಬರೆದಿದ್ದೀರಲ್ಲಾ, ಅದಕ್ಕೆ ನೀವು ಬರೋಲ್ವೇನೋ ಅಂತ ಅಂದ್ಕೊಂಡೆ' ಅಂದ್ರು.

**ನೇಸರು** : ಉಡುಪು, Setting ಬಗ್ಗೆ ಚಿತ್ರಾನೂ ಬರೀತೀರಾ ?

**ಗಿರೀಶ್** : ಇಲ್ಲ, Sketch ಬರೆಯೋಲ್ಲ. ಆದರೆ ಅವನ್ನೆಲ್ಲಾ ವಿವರವಾಗಿ ವರ್ಣಿಸುತ್ತೀನಿ.

**ನೇಸರು** : ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ಮುಟ್ಟುವಂತೆ ನೀವು ಹಿಂದಿ ಅಥವಾ ಇಂಗ್ಲೀಷಿನಲ್ಲಿ ಚಿತ್ರ ತಯಾರಿಸಲು ಯೋಚಿಸಿದ್ದುಂಟೆ ?

**ಗಿರೀಶ್** : ನಾನು ಹಿಂದಿಯಲ್ಲಿ 'Ghar' ಎನ್ನೊ ಚಿತ್ರ ಮಾಡಿದ್ದೇನೆ. ಅದೇ ಸಮಯದಲ್ಲಿ ಅದನ್ನ ಕನ್ನಡದಲ್ಲಿ 'ಮನೆ' ಎಂದೂ ತಯಾರಿಸಿದೆವು. ಆದರೆ ಈ ಪ್ರಯತ್ನ ಅಷ್ಟೇನೂ ಯಶಸ್ವಿಯಾಗಲಿಲ್ಲ. ಯಶಸ್ವಿಯಾಗಲಿಲ್ಲ ಅಂದರೆ, ಪ್ರಾಯಶಃ ಎರಡು ಭಾಷೆಯಲ್ಲೂ ಒಂದೇ ಸಮಯದಲ್ಲಿ ಚಿತ್ರ ತಯಾರಿಸಲು ಪ್ರಯತ್ನಿಸಿದರಿಂದ ಎರಡಕ್ಕೂ Justice ಮಾಡಲಾಗದೇ ಇರಬಹುದು. Attention divide ಆಗಿತ್ತು ಅನ್ನಿಸುತ್ತದೆ. ಮತ್ತೊಂದು ಸಲ try ಮಾಡಿ ನೋಡ್ತೇನೆ.

ಇಷ್ಟರಲ್ಲಿ ಅಂದಿನ ಚಿತ್ರ ಪ್ರದರ್ಶನಕ್ಕೆ ಸಮಯವಾದ್ದರಿಂದ ನಮ್ಮ ಸಂದರ್ಶನವನ್ನು ಇಷ್ಟಕ್ಕೇ ಸೀಮಿತಗೊಳಿಸಬೇಕಾಯಿತು.

## GIRISH KASARAVALLI'S FILMS

| Film | Year | Awards Won |
|---|---|---|
| Ghata Shraddha | 1977 | President's Golden Lotus |
| | | International Catholic Jury Award |
| | | Ducats Award at Mannheim Film Festival, Germany |
| | | Selected to participate in Director & Art Series in Museum of Modern Art, New York |
| | | Was screened as part of the 'Festival of India' programme in USA & France. |
| | | The Only Indian film to be selectedby the National Film Archives, Paris, to be screened as part of 100 best films of the world, during the centenary celebration of cinema |
| Aakramana | 1999 | |
| Mooru Drigalu | 1980 | |
| Tabarana Kathe | 1987 | President's Golden Lotus |
| Kraurya | 1989 | State Award |
| Mane Ghar (Hindi) | 1989 | |
| Thaisaheba | 1997 | President Golden Lotus |
| | | Four National Awards |
| | | Six State Awards |
| Bannada Vesha | 1998 | |

# ಕಾರ್ಗಿಲ್ ನಿಧಿ ಸಮರ್ಪಣಾ ಕಾರ್ಯಕ್ರಮದ ಅಂಗವಾಗಿ ಒಂದು ಸ್ನೇಹ ಕೂಟ



***Mr. M.V. Kamath, the eminent journalist addressing to the audience. Other in pic. are Mr. S. Doreswamy, Mr. Dharmraj Kulkarni and Mrs. Leela Rajkumar***

ಮೈಸೂರು ಅಸೋಸಿಯೇಷನ್ ಕಾರ್ಗಿಲ್ ಸಂತ್ರಸ್ಥ ಯೋಧರ ಹಾಗೂ ಅವರ ಕುಟುಂಬದ ಸಹಾಯಾರ್ಥವಾಗಿ ಸಂಗ್ರಹಿಸಿದ್ದ ನಿಧಿಯನ್ನು ತಾ. 24-7-1999 ಶನಿವಾರ ಬೆಳಿಗ್ಗೆ ಅಸೋಸಿಯೇಷನ್ನಿನ ಹಾಗೂ ಅವರ ಹಿತೈಷಿಗಳ ಪ್ರತಿನಿಧಿ ತಂಡವು 1 ಲಕ್ಷ 20 ಸಾವಿರ ಬ್ರಿಗೇಡಿಯರ್ ಕೌಲ್‌ರವರಿಗೆ ಅವರ ಕಛೇರಿಯಲ್ಲಿ ಅರ್ಪಿಸಿದರು.

ಅಂದೇ ಸಂಜೆ ಅಸೋಸಿಯೇಷನ್ನಿನ ಪ್ರಾಂಗಣದಲ್ಲಿ ಸದಸ್ಯರುಗಳ ಒಂದು ಸ್ನೇಹ ಕೂಟವನ್ನು ಏರ್ಪಡಿಸಲಾಗಿತ್ತು.

ಮೊಟ್ಟ ಮೊದಲಿಗೆ ಸೊಲ್ಲಾಪುರದಿಂದ ಆಗಮಿಸಿದ್ದ ಕಲಾವಿದರು ದೇಶಭಕ್ತಿಗೀತೆಗಳನ್ನು ಹಾಡಿದರು. ವಡಾಲಾದಲ್ಲಿರುವ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಶ್ರೀಮತಿ ಅಪರ್ಣ ಅವರು ಅಂದಿನ ಕಲಾವಿದರಾದ ಶ್ರೀ ಚಂದ್ರಕಾಂತ್ ಕೇಳ್‌ಕರ್, ರಾಜು ಹಾಗೂ ಆನಂದ ಇವರುಗಳ ಪರಿಚಯ ಮಾಡಿಕೊಟ್ಟು ಅವರ ದೇಶಭಕ್ತಿ ಗೀತೆಗಳ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾರ್ಯಕ್ರಮ ಸುಶ್ರಾವ್ಯವಾಗಿಯೂ, ಸ್ಫೂರ್ತಿದಾಯಕವಾಗಿಯೂ ಇದ್ದಿತು. ಅಂದು ಅತಿಥಿಗಳಾಗಿ ಹಾಗೂ ಭಾಷಣಕಾರರಾಗಿ ಆಗಮಿಸಿದ್ದ ಶ್ರೀ M.V. ಕಾಮತ್ ಹಾಗೂ ಶ್ರೀ ಧರ್ಮರಾಜ ಕುಲಕರ್ಣಿಯವರನ್ನು ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಸಭೆಗೆ ಪರಿಚಯ ಮಾಡಿಕೊಟ್ಟರು. M.V. ಕಾಮತ್ ರವರನ್ನು ಪರಿಚಯಿಸುತ್ತಾ ದಿಟ್ಟ ಹಾಗೂ ಪ್ರಾಮಾಣಿಕ ಪತ್ರಿಕೋದ್ಯೋಗಿಯಾಗಿರುವ ಇವರು ಅನೇಕ ಪತ್ರಿಕೆಗಳ ಮೂಲಕ ಎಲ್ಲರಿಗೂ ಚಿರಪರಿಚಿತರು ಎಂದು ಹೇಳಿದರು. ಶ್ರೀ ಕುಲಕರ್ಣಿಯವರು ಸ್ವಾತಂತ್ರ ಹೋರಾಟಗಾರರೆಂದೂ ಪ್ರಸ್ತುತ 'ರಬ್ಬರ್ ನ್ಯೂಸ್' ರ ಸಂಪಾದಕರಾಗಿ ಕೆಲಸ ಮಾಡುತ್ತಿರುವುದಾಗಿ ಪರಿಚಯ ಮಾಡಿಕೊಟ್ಟರು. ಶ್ರೀಮತಿ ಲೀಲಾ ರಾಜ್‌ಕುಮಾರ್ ರವರು ಅತಿಥಿಗಳಿಗೆ ಪುಷ್ಪಗುಚ್ಛವನ್ನಿತ್ತು ಗೌರವಿಸಿದರು ಮತ್ತು ಅಂದು ಬೆಳಿಗ್ಗೆ ಬ್ರಿಗೇಡಿಯರ್ ಕೌಲಿಗೆ ಅರ್ಪಿಸಿದ ಕೊಡುಗೆಯ ಬಗ್ಗೆ ವಿವರಿಸಿದರು. M.V. ಕಾಮತ್‌ರವರು ಮಾತನಾಡುತ್ತಾ ಭಾರತ ಮತ್ತು ಪಾಕ್‌ಗಳ ನಡುವೆ ನಡೆದಿರುವ ಯುದ್ಧಗಳಲ್ಲಿ ಕಾರ್ಗಿಲ್‌ನ ಯುದ್ಧ ನಾಲ್ಕನೆಯದು. ಇದರಲ್ಲಿ ಸುಮಾರು 1 ಸಾವಿರ ಭಾರತೀಯ ಸೈನಿಕರು ಸಾವು ನೋವಿಗೀಡಾಗಿದ್ದಾರೆ. ಭಾರತೀಯ ಸೈನ್ಯ ದುರ್ಗಮ ಪ್ರದೇಶದಲ್ಲಿ 15 ಸಾವಿರ ಅಡಿ ಎತ್ತರದ ಪರ್ವತ ಪ್ರದೇಶಗಳಲ್ಲಿ ಹೋರಾಟ ನಡೆಸಿ ಭಾರತಕ್ಕೆ ಜಯವನ್ನು ತಂದುಕೊಟ್ಟ ಶ್ರೇಯಸ್ಸು ಸಂಪೂರ್ಣವಾಗಿ ವೀರಯೋಧರಿಗೆ ಸೇರಿದ್ದೆಂದು ಅಭಿಪ್ರಾಯಪಟ್ಟರು. ಇಂದು ಭಾರತೀಯರ ದೇಶಪ್ರೇಮ ಆ ಬಾಲ ವೃದ್ಧರಾದಿಯಾಗಿ ಎಲ್ಲರಿಂದಲೂ ಪ್ರಕಟಗೊಳ್ಳುತ್ತಿದೆ. ಕೃತಕತೆ ಇಲ್ಲದ ನಿಷ್ಕಲ್ಮಷ ದೇಶಪ್ರೇಮ. ಇಂದು ಪರಕಾಷ್ಠತೆಯನ್ನು ಮುಟ್ಟಿದೆ. ಕಳೆದ 50 ವರ್ಷಗಳಿಂದ ಕಾಣದ ಒಗ್ಗಟ್ಟು ಭಾರತೀಯರೆಲ್ಲಾ ಒಂದು ಎಂಬ ಭಾವನೆ ನಮ್ಮ ವೀರಸೈನಿಕರಿಗೆ ಬೆಂಬಲವಾಗಿ ನಿಲ್ಲುವ ಮನೋಭಾವ ಎಲ್ಲವೂ ಸ್ವಾತಂತ್ರ ಪೂರ್ವ ಭಾರತೀಯನಂತೆಯೇ ಇದೆ. ಬ್ರಿಟೀಷರನ್ನು ದೇಶದಿಂದ ಹೊರಗಟ್ಟಿದಾಗ ಎಂತಹ ಒಗ್ಗಟ್ಟು ಐಕಮತ್ಯ ಭಾರತೀಯರು ತೋರಿಸಿದ್ದರೋ ಆ ಮನೋಭಾವ ಇಂದು ಮತ್ತೆ ಕಂಡು ಬಂದಿದೆ. ಇದು ಭಾರತೀಯ ಸೈನಿಕರಿಗೆ ಸ್ಫೂರ್ತಿದಾಯಕವಾಗಿದೆ. ಭಾರತೀಯರು ಅಂದು ಹೇಗಿದ್ದರೋ ಇಂದೂ ಹಾಗೆಯೇ ಇದ್ದಾರೆ. ಆದರೆ ಭ್ರಷ್ಟ ರಾಜಕಾರಣಿಗಳಿಂದ ದೇಶದ ಹೆಸರಿಗೆ ಕಳಂಕ ಬಂದಿದೆ. ಜನ ಬೇಸತ್ತಿದ್ದಾರೆಂದು ಅಭಿಪ್ರಾಯ ಪಟ್ಟರು.

ರಾಷ್ಟ್ರೀಯ ಬೆಂಬಲ ಭಾರತಕ್ಕೆ ದೊರೆಯುವದು ಸಹಜವಾದರೂ ಅಪರೂಪವಾಗಿ ಇಂದು ಮೊಟ್ಟ ಮೊದಲಿಗೆ ಅಂತರ‍್ರಾಷ್ಟ್ರೀಯ ಬೆಂಬಲ ದೊರೆತಿದೆ. ಪೌರ್ವಾತ್ಯ ರಾಷ್ಟ್ರಗಳೇ ಆಗಲೀ ಪಶ್ಚಿಮ ಯುರೋಪಿನ ರಾಷ್ಟ್ರಗಳೇ ಆಗಲೀ, ಇಲ್ಲಾ ಅಮೇರಿಕವೇ ಆಗಲಿ ಇಂದು ಭಾರತದ ನೀತಿಯನ್ನು ಬಲವಾಗಿ



***Mr. Dharmraj Kulkarni, a freedom fighter, another speaker on the occasion being feliciated by the Vice President Mrs. Leela Rajkumar***



*Contributions to Army Central Welfare Fund being handed over to Brigadier Kaul by Mrs. Leela Rajkumar, Vice President of the Mysore Association. Others in Pic. are Mr. M.A.N. Prasad, Mr. Manjunathaiah, Mr. A.S. Sheshkumar and Mr. Manju Devadiga.*

ಸಮರ್ಥಿಸುತ್ತಿರುವುದೇಕೆ? ಎಂಬ ವಿಚಾರ ಮಾತನಾಡುತ್ತಾ ಭಾರತದ ಆರ್ಥಿಕ ಸುಭದ್ರತೆ, ತೆರೆದ ಮಾರುಕಟ್ಟೆ ಇಲ್ಲಿ ಅಪಾರ ಜನಸಂಖ್ಯೆಯಿಂದಾಗಿ ನಿರಂತರ ಹೆಚ್ಚುತ್ತಿರುವ ಬೇಡಿಕೆ. ಪಕ್ಕಾ ವ್ಯಾಪಾರೀದೇಶವಾದ ಅಮೇರಿಕಾ ಪ್ರಬಲ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿರುವ ಭಾರತದ ಮಾರುಕಟ್ಟೆಯ ಆಕರ್ಷಣೆಗೆ ಬಳಗಾಗಿರುವುದೇ ಕಾರಣವೆಂದರು. ಪಾಕಿಸ್ತಾನಕ್ಕೆ ಹಿಂದಿನಿಂದಲೂ ಬೆಂಬಲವಾಗಿ ನಿಂತ ಚೀನಾ ಹಾಗೂ ಅಮೇರಿಕ ಇಂದು ಪಾಕ್‌ಗೆ ಏಕೆ ಬೆಂಬಲ ನೀಡಲಿಲ್ಲ ! ಎಂಬ ವಿಚಾರವಾಗಿ ಮಾತನಾಡುತ್ತಾ ಪಾಕ್‌ನ ಹದಗೆಟ್ಟ ಆರ್ಥಿಕ, ರಾಜಕೀಯ ಸಾಮಾಜಿಕ ಪರಿಸ್ಥಿತಿ. ಕಾರಣವಾಗಿದೆ. ಹಾಗೇ ಇಂದು ನಮಗೆ ದೊರೆತಿರುವ ಅಮೇರಿಕೆಯ ಸಮರ್ಥನೆ ಶಾಶ್ವತವೆಂದು ತಿಳಿಯುವಂತಿಲ್ಲ. ಅಮೆರಿಕಾ ಭಾರತದ ಮಿತ್ರನೂ ಅಲ್ಲ ಶತ್ರುವೂ ಅಲ್ಲ. ಅಂತರ್ರಾಷ್ಟ್ರೀಯ ಸಂಬಂಧಗಳು ಆಯಾಕಾಲಕ್ಕೆ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಬದಲಾಗುವಂತಹವು ಎಂದು ವಿವರಿಸಿದರು. ಇಂದು ಪಾಕ್‌ನಲ್ಲಿ ನವಾಬ್ ಷರೀಫರೊಬ್ಬರ ಆಡಳಿತವಿಲ್ಲ. I.S.I. ಆಡಳಿತ, ಮುಲ್ಲಾಗಳ ಆಡಳಿತ, ಧಾರ್ಮಿಕ ಅತಿರೇಕಿಗಳ ಆಡಳಿತ ಇದರ ಮಧ್ಯೆ ಸ್ನೇಹಶೀಲ ಸಾಮಾನ್ಯ ಜನರ ಪಾಡು ಶೋಚನೀಯವಾಗಿದೆ.

ಈ ಬಾರಿಯ ಕಾರ್ಗಿಲ್ ಯುದ್ಧ ಭಾರತೀಯ ಸೈನ್ಯದಲ್ಲಿಯ ಯುದ್ಧೋಪಕರಣಗಳ ಕೊರತೆಯನ್ನು ತೋರಿಸಿಕೊಟ್ಟಿದೆ. ಅತ್ಯಾಧುನಿಕ ಶಸ್ತ್ರಾಸ್ತ್ರವನ್ನೊಳಗೊಂಡ ಪಾಕ್‌ನ ಆಕ್ರಮಣಕಾರರನ್ನು ತಮ್ಮಲ್ಲಿಯ ಕೊರತೆ ಏನಿದ್ದರೂ ಲೆಕ್ಕಿಸದೆ ಭಾರತೀಯ ವೀರರು ಮತ್ತೊಮ್ಮೆ ತಮ್ಮ ಶೌರ್ಯ ಪ್ರದರ್ಶನವನ್ನು ಮಾಡಿ, ದೇಶಕ್ಕೆ ಕೀರ್ತಿ ತಂದಿದ್ದಾರೆ. ಪಾಕ್ ಸಮೃದ್ಧ ಆಧುನಿಕ ಶಸ್ತ್ರಾಸ್ತ್ರಕ್ಕೂ, ಭಾರತದಲ್ಲಿ ನಿರಂತರ ನಡೆಸುತ್ತಾ ಬಂದಿರುವ ಭಯೋತ್ಪಾದಕರ ಕಾರ್ಯ ಚಟುವಟಿಕೆಗೂ ಹಣ ಎಲ್ಲಿಂದ ತರುತ್ತಿದೆ ಎಂಬ ವಿಷಯ ಮಾತನಾಡುತ್ತಾ, ಅಫೀಮಿನ ಕಳ್ಳಸಾಗಾಣಿಕೆಯ ದುಡಿಮೆಯ ಅಕ್ರಮ ಸಂಪಾದನೆ ಇದಕ್ಕೆ ವಿನಿಯೋಗವಾಗುತ್ತಿದೆ. ನಾಲ್ಕು ಬಾರಿ ಆದ ಯುದ್ಧದಲ್ಲೂ ಸೋಲನ್ನಪ್ಪಿದ ಪಾಕ್ ಇನ್ನಾದರೂ ಬುದ್ಧಿ ಕಲಿಯುವುದೇ ನೋಡಬೇಕೆಂದು ಅಭಿಪ್ರಾಯ ಪಟ್ಟರು.

ಕಾರ್ಗಿಲ್‌ನ ಆಕ್ರಮಣದ ಸನ್ನಿವೇಶದಲ್ಲಿ ಭಾರತದ ಹಂಗಾಮಿ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರ ದೃಢತೆಯನ್ನು ಪ್ರಶಂಸಿಸಿದರು. ಭಾರತದ ಮಹಮ್ಮದೀಯರ ಬಗ್ಗೆ ಮಾತನಾಡುತ್ತಾ ಈ ಕಾರ್ಗಿಲ್ ಆಕ್ರಮಣದ ಸನ್ನಿವೇಶದಲ್ಲಿ ಮಹಮ್ಮದೀಯರ ವರ್ತನೆಯಿಂದ ಅವರೂ ಬುದ್ಧಿ ಕಲಿತಿದ್ದಾರೆಂದು ಅಭಿಪ್ರಾಯಪಟ್ಟರು.

ಕಾರ್ಗಿಲ್‌ನಲ್ಲಿ ಆಕ್ರಮಣ ನಡೆದದ್ದರಿಂದಲೇ ಭಾರತೀಯರು ತನ್ನ ಐಕ್ಯಮತ ಎಷ್ಟರ ಮಟ್ಟಿನದೆಂಬ ವಿಚಾರ ಪ್ರಪಂಚಕ್ಕೆ ತಿಳಿಸುವಂತಾಯ್ತು. ಇದಕ್ಕಾಗಿ ನವಾಬ್ ಷರೀಫರಿಗೆ ಅಭಿನಂದನೆ (Thanks) ಯನ್ನರ್ಪಿಸಬೇಕು ಎಂದರು. ಭಾಷಣದ ನಂತರ ಶ್ರೋತೃಗಳು ಕೇಳಿದ ಪ್ರಶ್ನೆಗಳಿಗೆ ಈ ರೀತಿ ಉತ್ತರಿಸಿದರು.

**ಮುಂದೆ ಭಾರತದ ನಿಲುವೇನು ?**

ಭಾರತ ಈಗ ಮಾಡಿದಷ್ಟೇ ಮಾಡಲು ಸಾಧ್ಯ. ಆಕ್ರಮಣಕಾರಿಗಳನ್ನು ಹಿಂದಿಕ್ಕಟ್ಟಿದ್ದು ಪ್ರಚಾರ ಮಾಧ್ಯಮಗಳ ಮುಖಾಂತರ (T.V. B.B.C.) ಪ್ರಪಂಚದ ಮೂಲೆ ಮೂಲೆಗೂ ಆಕ್ರಮಣಕಾರಿ ಪಾಕ್ ಎಂದು ತೋರಿಸಿದ್ದಾಗಿದೆ. ಇನ್ನೇನೂ ಮಾಡುವಂತಿಲ್ಲ ಇನ್ನೇನಾದರೂ ಈ ದಿಸೆಯಲ್ಲಿ ಮಾಡುವುದಿದ್ದಲ್ಲಿ ಚೀನಾ, ಅಮೇರಿಕಾ ಮಾಡಬಹುದೆಂದು ಅಭಿಪ್ರಾಯ ಪಟ್ಟರು.

ಪಾಕ್ ಪದೇ ಪದೇ ಭಾರತದ ಮೇಲೆ ಏಕೆ ಆಕ್ರಮಣ ನಡೆಸುತ್ತದೆ ?

ಪಾಕ್ ಸರ್ಕಾರ ತನ್ನ ಹದಗೆಟ್ಟ ಆರ್ಥಿಕ ಪರಿಸ್ಥಿತಿಯನ್ನು ಮುಚ್ಚಿಟ್ಟು ಕಾಶ್ಮೀರದಿಂದಲೇ ಪಾಕ್‌ನ ಪರಿಪೂರ್ಣತೆ ಎಂದು ವಾದ ಮಾಡುತ್ತಾ ಮುಂದುವರಿಯುತ್ತಿರುವುದೇ ಕಾರಣ.

ಕುಲಕರ್ಣಿಯವರು ಮಾತನಾಡುತ್ತಾ ಮೈಸೂರು ಅಸೋಸಿಯೇಷನ್ ಅದರ ಪರಂಪರೆಗನುಸಾರವಾಗಿ ಇಂದೂ ನಡೆದುಕೊಂಡಿದೆ. ಭಾರತದ ಯಾವುದೇ ಪರಿಸ್ಥಿತಿಯಲ್ಲಾದರೂ ಅದು ತನ್ನ ಬೆಂಬಲ ಹಾಗೂ ಕಾಣಿಕೆ ನೀಡಿದೆ ಎಂದರು. ಸಾಕಷ್ಟು ಸಂಖ್ಯೆಯಲ್ಲಿ ಸದಸ್ಯರು ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

— ರಮ ಕೃಷ್ಣ

## OF VALOUR AND PATRIOTISM

Hey ! Jawans of India,
We salute you and your courage,
I am sure that this is the kind of work.
That everyone in India shall encourage.

Oh ! brave Jawans in the border,
Don't you sacrifice your lives,
to save ours, in order;
You always have Death for your company,
But, you are always cheerful as any

Mother India is your mother,
For whom you sacrifice your life,
and for no other,
People learn from your courage and valour,
But, you lead your lives modestly,
without any splendour.

You live inconspiciously, but die gallantly,
like true sons of your country,
It makes us all very sad, but very proud
at the same time,
That, to save our country,
You lost your life, as if it just cost a dime

**— PADMA SUBRAMANIAN**

### CONTRIBOTORS TO ARMY CENTRE WELFARE FUND

| No. | Name of the Donors |
|---|---|
| 1. | Sri S. Subramani |
| 2. | Sri K. Manjunathaiah |
| 3. | Smt. Lalitha Balu |
| 4. | Dr. B. R. Manjunth |
| 5. | Sri G. D. Jinagouda |
| 6. | Sri N. Sudharshan |
| 7. | Sri Srinivas Rao K.N. |
| 8. | AVI Audiosonics |
| 9. | Sri Kalaivanan |
| 10. | Sri Radhakrishnan |
| 11. | Sri R. Anand |
| 12. | Sri Revankar D. |
| 13. | Sri Gopalkrishna B.H. |
| 14. | Sri Ramalingam |
| 15. | Smt. Purnima Srikrishna |
| 16. | Smt. B.N. Shardabai |
| 17. | Vijaya Construction Co. |
| 18. | Sri Upadhyaya R. K. |
| 19. | Sri G. R. Anand |
| 20. | Sri G. H. Ranganath Rao |
| 21. | Sri S. Nanda |
| 22. | Sri Krishna Iyengar |
| 23. | Smt. Pushpa R. Rao |
| 24. | Sri M.A.N. Prasad |
| 25. | Smt. Triveni Mohan |
| 26. | Suresh Rao & Co. |
| 27. | Sri Suresh Kasnis |
| 28. | Sri Krishna Swamy Rao |
| 29. | Sri C.V. Nagraj |
| 30. | Mysore Concem |
| 31. | Mysore Association, Bombay |
| 32. | Smt. Leela Rajkumar |
| 33. | Intertek Testing Service India (P) Ltd's Staff Contribution |
| 34. | Intertek Testing Service India (P) Ltd. |
| 35. | Sri Rajendra Kumar (ITS Tirpur) |
| 36. | Sri Nisar Ahmed (ITS Tirpur) |
| 37. | Smt. L.M. Naidu |
| 38. | Sri N.M. Joshi |
| 39. | Sri H.V.S. Prasanna |
| 40. | Nirmalya Charity Trust |
| 41. | Sri G.V. Kulkarni |
| 42. | Sri R.S. Ranganath |
| 43. | Sri Subba Rao |
| 44. | Workers of Vijaya Construction Co. |
| 45. | Sri Gangadhar Mirji |
| 46. | Sri C.K. Krishna Murthy |
| 47. | Sri C.S. Dinesh |
| 48. | Sri Bhaskar Bhat |
| 49. | Sri S. N. Suryanarayan |
| 50. | Sri K.A. Malani |
| 51. | Sri G.N. Krishna |
| 52. | Sri Gregory Rodrigues |

### ಪೇಜಾವರ ಸದಾಶಿವರಾವ್ ಸ್ಮಾರಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಕನ್ನಡದ ಪ್ರತಿಭಾವಂತ ಹೊಸ ಕವಿಗಳಿಗೆ ಉತ್ತೇಜನವೀಯುವ ಉದ್ದೇಶದಿಂದ ಮುಂಬಯಿ ಕರ್ನಾಟಕ ಸಂಘವು ಕನ್ನಡದ ನವ್ಯ ಕಾವ್ಯಮಾರ್ಗದಲ್ಲಿ ಮೊದಲ ಹೆಜ್ಜೆಯನ್ನಿಟ್ಟ ಪ್ರತಿಭಾವಂತ ಕವಿ ದಿ. ಪೇಜಾವರ ಸದಾಶಿವ ರಾವ್ ಅವರ ಸ್ಮರಣಾರ್ಥ ಕೊಡಮಾಡುವ ಪ್ರಶಸ್ತಿಯ 1999ನೇ ಸಾಲಿನ ಪ್ರಶಸ್ತಿಗಾಗಿ ಕವನ ಸಂಕಲನಗಳನ್ನು ಆಹ್ವಾನಿಸಿದೆ. ರೂ. 1100/- ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಈ ಪ್ರಶಸ್ತಿಯ ವಿವರಗಳು ಈ ಕೆಳಗಿನಂತಿವೆ.

೧. ಕರ್ನಾಟಕ ಒಳ ಹೊರಗಿದ್ದು 27 ವರ್ಷದೊಳಗಿರುವ ಯುವ ಕನ್ನಡ ಕವಿಗಳು ಈ ಸ್ಪರ್ಧೆಗಾಗಿ ತಮ್ಮ ಕವನ ಸಂಕಲನಗಳನ್ನು ಕಳುಹಿಸಬಹುದು.

೨. ಬಹುಮಾನ ನೀಡುವ ವರ್ಷದ ಹಿಂದಿನ ಎರಡು ವರ್ಷಗಳಲ್ಲಿ ಪ್ರಕಟವಾದ ಆಯಾ ಕವಿಗಳ ಪ್ರಥಮ ಕವನ ಸಂಗ್ರಹವನ್ನು ಮಾತ್ರ ಪರಿಗಣಿಸಲಾಗುವುದು. ಈ ವರ್ಷದ ಬಹುಮಾನಕ್ಕಾಗಿ 1997 ಹಾಗೂ 98ರಲ್ಲಿ ಪ್ರಕಟವಾದ ಕವನ ಸಂಕಲನಗಳನ್ನು ಪರಿಗಣಿಸಲಾಗುವುದು.

೩. ಕವನ ಸಂಕಲನದ ಮೂರು ಪ್ರತಿಗಳನ್ನು ಲಕೋಟೆಯ ಮೇಲೆ `ಪೇಜಾವರ ಸದಾಶಿವರಾವ್ ಸ್ಮಾರಕ ಪ್ರಶಸ್ತಿಗಾಗಿ ಎಂದು ಸ್ಪಷ್ಟವಾಗಿ ನಮೂದಿಸಿ 1999ರ ಸೆಪ್ಟೆಂಬರ್ 30ರೊಳಗಾಗಿ ಕಳುಹಿಸಿ ಕೊಡಬೇಕು. ಸ್ಪರ್ಧೆಗಳಿಗೆ ಪ್ರವೇಶ ಶುಲ್ಕವಿಲ್ಲ.

೪. ಸ್ಪರ್ಧೆಗೆ ಕಳುಹಿಸಿದ ಕೃತಿ ಪ್ರಥಮ ಕಾವ್ಯ ಸಂಕಲನವೆಂಬ ಸ್ವಂತ ಪ್ರಮಾಣ ಪತ್ರವನ್ನೂ ಕೃತಿಗಳೊಂದಿಗೆ ಕಳುಹಿಸಬೇಕು.

೫. ಸ್ಪರ್ಧೆಗೆ ಬಂದ ಕೃತಿಗಳನ್ನು ಹಿಂತಿರುಗಿಸಲಾಗುವುದಿಲ್ಲ. ನಿರ್ಣಾಯಕ ಸಮಿತಿಯ ತೀರ್ಮಾನವೇ ಅಂತಿಮ ಹಾಗೂ ಈ ಬಗ್ಗೆ ಪತ್ರವ್ಯವಹಾರಕ್ಕೆ ಆಸ್ಪದವಿಲ್ಲ.

### ಡೊಂಬಿವಲಿಯ ಕನ್ನಡಿಗ ದತ್ತಾತ್ರೇಯ ಭಟ್ ಅವರಿಗೆ ಥಾನೆ ಶ್ರೀಮಾನ್ ಪ್ರಶಸ್ತಿ.

ಕನ್ನಡಿಗ ಶ್ರೀ ದತ್ತಾತ್ರೇಯ ಭಟ್ ಅವರು 40 ವರ್ಷ ಮೇಲ್ಪಟ್ಟವರಿಗೆ ಏರ್ಪಡಿಸಿದ ಥಾನಾ ಜಿಲ್ಲಾ ಮಟ್ಟದ ದೇಹಧಾರ್ಢ್ಯ ಸ್ಪರ್ಧೆಯಲ್ಲಿ ಮೊದಲನೇ ಸ್ಥಾನ ಪಡೆದು ಶ್ರೀಮಾನ್ ಪ್ರಶಸ್ತಿಯನ್ನು ಗಳಿಸಿದ್ದಾರೆ. ಸ್ಪರ್ಧೆಯು ಆಗೋಸ್ಟ್ 8ರಂದು ಥಾನೆಯ ಸೆಂಟರ್ ರೈಲ್ವೆಯ ಸಭಾಗೃಹದಲ್ಲಿ ಜರುಗಿತು. ಒಟ್ಟು 28 ಸ್ಪರ್ಧಾಳುಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಶ್ರೀ ಭಟ್ ಅವರನ್ನು ಕಾನವಿಂದೆ ವ್ಯಾಯಾಮ ಮಂದಿರದ ಶ್ರೀ ಸುನೀಲ್ ಜೋಯಿಲ್ ಅವರು ತರಬೇತಿ ನೀಡಿ ಪ್ರೋತ್ಸಾಹಿಸಿದರು.

43 ವರ್ಷದ ಶ್ರೀ ದತ್ತಾತ್ರೇಯ ಪುಂಡಲೀಕ ಭಟ್ ಅವರ ಹುಟ್ಟೂರು ಮಂಗಳೂರು. S.S.L.C. ಯನ್ನು ಮಂಗಳೂರಿನ ಕೆನರಾ ಹೈಸ್ಕೂಲ್‌ನಲ್ಲಿ ಮುಗಿಸಿ ಮುಂಬಯಿಗೆ ಬಂದು ಬಿ.ಕಾಮ್. ಪದವೀಧರರಾಗಿದ್ದಾರೆ. ಡೊಂಬಿವಲಿಯಲ್ಲಿ ವಾಸಿಸುವ ಭಟ್ ಅವರು ತಮ್ಮದೇ ಆದ ದುರ್ಗಾ ಪವರ್ ಟ್ರೋನಿಕ್ಸ್ ಪ್ರೈ. ಲಿಮಿಟೆಡ್ ಕಂಪನಿಯನ್ನು ನಡೆಸುತ್ತಿದ್ದಾರೆ.

ಮೊಟ್ಟ ಮೊದಲ ಭಾರಿ ಇಂತಹ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ಭಟ್ ಅವರು ಉತ್ತಮ ಹಾಡುಗಾರರೂ, ನಟರೂ ಆಗಿದ್ದು ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಈಗ ರಾಜ್ಯ ಮತ್ತು ರಾಷ್ಟ್ರ ಮಟ್ಟದ ದೇಹ ಧಾರ್ಢ್ಯ ಸ್ಪರ್ಧೆಗೆ ಅವರನ್ನು ಆಯ್ಕೆ ಮಾಡಲಾಗಿದ್ದು ಅಲ್ಲಿ ಅವರು ಯಶಸ್ವಿಯಾಗಲೆಂದು ಹಾರೈಸೋಣ.

### ಡಾ. ರಾಜೀವ ತಾರಾನಾಥರಿಗೆ ಮುಂಬಯಿಯಲ್ಲಿ ಸನ್ಮಾನ

ಕರ್ನಾಟಕ ಸರಕಾರವು ಸಂಗೀತದಲ್ಲಿ ಅಪೂರ್ವ ಸಾಧನೆ ಮಾಡಿರುವ ಮಹನೀಯರಿಗೆ ಕೊಡಮಾಡುವ ಚೌಡಯ್ಯ ಸ್ಮಾರಕ ಪ್ರಶಸ್ತಿಯನ್ನು ಇತ್ತೀಚೆಗೆ ಪಡೆದಿರುವ ಡಾ. ರಾಜೀವ ತಾರಾನಾಥರ ಸರೋದ್ ವಾದನ ಕಾರ್ಯಕ್ರಮವನ್ನು ಇತ್ತೀಚೆಗೆ ಮುಂಬಯಿ ಕರ್ನಾಟಕ ಸಂಘವು ಹಮ್ಮಿಕೊಂಡಿತು. ಮುಂಬಯಿಯ ಮಾಟುಂಗಾದಲ್ಲಿರುವ ಕರ್ನಾಟಕ ಸಂಘವು ತನ್ನ ಸಾಂಸ್ಕೃತಿಕ ಕಲಾವೇದಿಕೆ ಕಲಾಭಾರತಿಯಡಿಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಇದೇ ದಿನ ರಾಜೀವ ತಾರಾನಾಥ್ ಅವರನ್ನು ಚೌಡಯ್ಯ ಪ್ರಶಸ್ತಿ ಪಡೆದ ಹಿನ್ನೆಲೆಯಲ್ಲಿ ಶಾಲುಹೊದಿಸಿ, ಫಲಪುಷ್ಪಗಳನ್ನಿತ್ತು ಸನ್ಮಾನಿಸಲಾಯಿತು.

ಸನ್ಮಾನಕ್ಕೆ ಉತ್ತರವಾಗಿ ಮಾತನಾಡಿದ ಡಾ. ತಾರಾನಾಥ್ ಅವರು ನನಗೆ ಇಂದು ನೀಡಿರುವ ಈ ಫಲಪುಷ್ಪಗಳೆಲ್ಲ ಮುಂಬಯಿ ಕಲಾಸಕ್ತರ ಪ್ರೀತಿಯ ಕುರುಹು. ಕರ್ನಾಟಕ ಹಾಗೂ ಹಿಂದೂಸ್ಥಾನೀ ಸಂಗೀತ ಕ್ಷೇತ್ರಗಳಿಗೆ ಕರ್ನಾಟಕದ ಕಲಾವಿದರು ನೀಡಿರುವ

ಕಾಣಿಕೆ ಅಪಾರವಾದುದು. ಈ ಹಿರಿಯ ಕಲಾವಿದರಲ್ಲಿ ಸಂಗೀತದ ಕಡೆಗಿರುವ ಶ್ರದ್ಧೆ ಮತ್ತು ಅಪಾರ ಪರಿಶ್ರಮಗಳು ಅವರನ್ನು ಶ್ರೇಷ್ಠ ಕಲಾವಿದರನ್ನಾಗಿಸಿವೆ. ಸಾವಿರಾರು ವರ್ಷಗಳ ಶ್ರೀಮಂತ ಸಂಸ್ಕೃತಿಯೂ ಅವರ ಸಂಗೀತದ ಮೂಲಕ ಹೊರಹೊಮ್ಮುವುದನ್ನು ನಾವು ನೋಡುತ್ತ ಬಂದಿದ್ದೇವೆ. ಇದು ಕನ್ನಡದ ನೆಲ, ಭಾಷೆಗಳಲ್ಲಿರುವ ಗುಣ' ಎಂದು ನುಡಿದರು.

ಕಾರ್ಯಕ್ರಮದ ಆರಂಭದಲ್ಲಿ ಹಿಂದೂಸ್ಥಾನೀ ಸಂಗೀತಕ್ಕೆ ಕರ್ನಾಟಕದ ಕಲಾವಿದರು ನೀಡಿದ ಕಾಣಿಕೆ 'ಬಸಂತ ಮುಖಾರಿ' ಆಲಾಪ್ : ಜೋಡ್ ಝಾಲಾದ ಮೂಲಕ ರಾಜೀವ ತಾರಾನಾಥರು ಸರೋದ್ ವಾದನವನ್ನು ಪ್ರಾರಂಭಿಸಿದರು. ಜೀವನ್ ಪುರಿಯಲ್ಲಿ ಒಂದು ಬಂದಿಶ್, ಸಿಂಧು ಭೈರವಿಯಲ್ಲಿ ರಾಗಮಾಲಿಕೆಗಳನ್ನು ನುಡಿಸಿದರು. ವಿಲಂಬಿತ ಧೃತ್ ತ್ರಿತಾಳದಲ್ಲಿ ತಬಲಾದ ಜೊತೆ ಅವರು ನಡೆಸಿದ ಸವಾಲ್ - ಜವಾಬ್ (ಜುಗಲ್ಬಂದಿ) ಪ್ರೇಕ್ಷಕರನ್ನು ಬಹುವಾಗಿ ರಂಜಿಸಿತು. ಶ್ರೇಷ್ಠ ತಬಲಾ ವಾದಕರಲ್ಲೊಬ್ಬರಾದ ಯೋಗೀಶ್ ಸಂಶಿ ತಬಲಾ ಹಾಗೂ ಗಿರೀಶ್ ಪಾಟೀಲ್ ಅವರು ತಾನ್ಪುರದಲ್ಲಿದ್ದರು.

ಕಲಾಭಾರತಿಯ ನಿರ್ದೇಶಕ ಪ್ರಕಾಶ್ ಬುರ್ಡೆ ಅವರು ಕಾರ್ಯಕ್ರಮವನ್ನು ನಿರ್ವಹಿಸಿ ವಂದಿಸಿದರು.

### ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಕನ್ನಡ ಸರ್ಟಿಫಿಕೇಟು ಕೋರ್ಸಿನ ಉದ್ಘಾಟನೆ

ಮಾಟುಂಗಾದಲ್ಲಿರುವ ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ತಾ. 22-8-99ರಂದು ಕನ್ನಡ ಓದಲು ಬರೆಯಲು ಬಾರದವರಿಗೆ ಮತ್ತು ಇತರರಿಗೆ ಕನ್ನಡ ಕಲಿಸುವ ಉದ್ದೇಶದಿಂದ ಕನ್ನಡ ಸರ್ಟಿಫಿಕೇಟು ಕೋರ್ಸನ್ನು ಪ್ರಾರಂಭಿಸಲಾಯ್ತು. ಇದರ ಉದ್ಘಾಟನೆಯನ್ನು ಭಾಭಾ ಅಣುಶಕ್ತಿ ಕೇಂದ್ರದ ನಿವೃತ್ತ ವಿಜ್ಞಾನಿ ಶ್ರೀ ಕೆ. ಮಂಜುನಾಥಯ್ಯ ಇವರು ಮಾಡಿದರು. ಸಂಘದ ಅಧ್ಯಕ್ಷರಾದ ಡಾ। ಜಿ. ಡಿ. ಜೋಶಿಯವರು ನೆರೆದ ಸಭಿಕರನ್ನು ಮತ್ತು ವಿದ್ಯಾರ್ಥಿಗಳನ್ನು ಸ್ವಾಗತಿಸಿ ಮುಂಬಯಿ ಕನ್ನಡ ಸಂಘವು ಕಳೆದ 62 ವರ್ಷಗಳಿಂದ ನಡೆಸುತ್ತಿರುವ ಕನ್ನಡ ಕಾರ್ಯಕ್ರಮಗಳ ಬಗ್ಗೆ ವಿವರವಾಗಿ ತಿಳಿಸಿದರು. ಸಂಘದ ಉಪಾಧ್ಯಕ್ಷರಾದ ಡಾ। ಕೆ. ರಘುನಾಥ್ ಶ್ರೀ ಕೆ. ಮಂಜುನಾಥಯ್ಯನವರ ಮತ್ತು ಕನ್ನಡ ಅಧ್ಯಾಪಿಕೆ ಶ್ರೀಮತಿ ಲಕ್ಷ್ಮೀ ಸುಧೀಂದ್ರರ ಪರಿಚಯ ಮಾಡಿದರು. ಈ ಕನ್ನಡ ಸರ್ಟಿಫಿಕೇಟು ಕೋರ್ಸಿಗೆ ಸುಮಾರು 35 ಮಂದಿ ಹೆಸರು ನೋಂದಾಯಿಸಿದ್ದರು. ಶ್ರೀ ಕೆ. ಮಂಜುನಾಥಯ್ಯ ಅವರು ದೀಪ ಬೆಳಗಿಸಿ ಕೋರ್ಸಿನ ಉದ್ಘಾಟನೆ ಮಾಡಿ ತಮ್ಮ ಉದ್ಘಾಟನಾ ಭಾಷಣದಲ್ಲಿ ಕನ್ನಡ ಭಾಷೆಯ ಪರಂಪರೆ, ಇತಿಹಾಸ ಮಹತ್ವಗಳನ್ನು ವಿವರವಾಗಿ ತಿಳಿಸಿದರು. ಕನ್ನಡಕ್ಕೆ ಈ ತನಕ ಏಳು ಜ್ಞಾನಪೀಠ ಪ್ರಶಸ್ತಿಗಳು ಸಿಕ್ಕಿದ್ದು ಭಾರತದ ಇತರ ಭಾಷೆಗಳ ತುಲನೆಯಲ್ಲಿ ಕನ್ನಡಿಗರು ಮಂಚೂಣಿಯಲ್ಲಿದ್ದಾರೆಂದು ತಿಳಿಸಿದರು. ಕನ್ನಡ ಭಾಷೆಯ ಮೃದು ಸ್ವಭಾವದ ಸುಂದರ ಭಾಷೆಯಾಗಿದ್ದು ಇದನ್ನು ಕನ್ನಡಿಗರಲ್ಲದವರೂ ಕಲಿತರೆ ಅದರಿಂದ ತುಂಬಾ ಲಾಭವಿದೆ. ಈ ದಿನ ಇಷ್ಟು ಮಂದಿ ವಿದ್ಯಾರ್ಥಿಗಳು ಈ ಕೋರ್ಸಿಗೆ ಪ್ರವೇಶ ಪಡೆದಿರುವುದನ್ನು ಕಂಡು ನನಗೆ ತುಂಬಾ ಸಂತೋಷವಾಗಿದೆ ಎಂದರು. ಮುಂಬಯಿ ಕನ್ನಡ ಸಂಘವು, ಮೈಸೂರು ಅಸೋಸಿಯೇಷನ್ ಮತ್ತು ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿ, ವಡಲಾ ಇದರೊಂದಿಗೆ ನಿಕಟ ಸಂಬಂಧ ಇರಿಸಿರುವ ಕಾರಣ ಈ ಎರಡೂ ಸಂಸ್ಥೆಗಳೂ ಮುಂಬಯಿ ಕನ್ನಡ ಸಂಘಕ್ಕೆ ಎಲ್ಲಾ ವಿಧದ ಸಹಕಾರವನ್ನು ನೀಡಲು ಸಿದ್ಧ ಎಂದು ತಿಳಿಸಿದರು.

ಮುಂಬಯಿ ಕನ್ನಡ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಶ್ರೀ ಜಿ. ಎಸ್. ನಾಯಕರು ಕಾರ್ಯಕ್ರಮವನ್ನು ನಿರ್ವಹಿಸಿದರು. ಸಂಘದ ಗ್ರಂಥ ಪಾಲಕರಾದ ಸಿದ್ದಕಟ್ಟೆ ಪದ್ಮನಾಭ ಶೆಟ್ಟಿಯವರು ಪ್ರಾರ್ಥನೆ ಹಾಡಿದರು. ಪ್ರವೇಶ ಪಡೆದ ವಿದ್ಯಾರ್ಥಿಗಳು ತಮ್ಮ ತಮ್ಮ ಕಿರು ಪರಿಚಯ ನೀಡಿ ತಾವು ಕನ್ನಡ ಭಾಷೆ ತಿಳಿಯುವ ಉದ್ದೇಶವನ್ನು ತಿಳಿಸಿದರು. ವೇದಿಕೆಯಲ್ಲಿ ಕನ್ನಡ ಸಂಘದ ಗೌರವ ಜೊತೆ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ರಾಮು, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಸೋಮನಾಥ ಕರ್ಕೇರ ಮತ್ತು ಪುಸ್ತಕ ಭಂಡಾರದ ಅಧಿಕಾರಿ ಶ್ರೀಮತಿ ಸುಗುಣ ಶೆಟ್ಟಿ ಉಪಸ್ಥಿತರಿದ್ದರು. ತಾ. 29-8-99ರಿಂದ ಪ್ರತೀ ಭಾನುವಾರ ಬೆಳಿಗ್ಗೆ ಗಂಟೆ 10-00ರಿಂದ 12-00ರ ತನಕ ಈ ಕನ್ನಡ ತರಗತಿಯನ್ನು ಮೈಸೂರು ಅಸೋಸಿಯೇಷನ್‌ನ ಸಭಾಗೃಹದಲ್ಲಿ ನಡೆಸಲಾಗುವುದು. ಕೊನೆಯಲ್ಲಿ ಗೌ. ಪ್ರ. ಕಾರ್ಯದರ್ಶಿ ಶ್ರೀ ಜಿ. ಎಸ್. ನಾಯಕರು ಈ ಕಾರ್ಯಕ್ರಮವು ಯಶಸ್ವಿಯಾಗಲು ನೆರವಾದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

### ಸಂಗೀತ ವಿದ್ಯಾಲಯದ ಸಾಧನೆ

ಡೊಂಬಿವಲಿಯಲ್ಲಿರುವ ಮೈಸೂರು ಸಂಗೀತ ವಿದ್ಯಾಲಯವು ಕಳೆದ 20 ವರ್ಷಗಳಿಂದಲೂ ಸಂಗೀತ ಶಿಕ್ಷಣ ಕೊಡುತ್ತಾ ಕರ್ನಾಟಕ ಸರ್ಕಾರದ ಸಂಗೀತ ಪರೀಕ್ಷೆಗಳಿಗೆ ಅಭ್ಯರ್ಥಿಗಳನ್ನು ಕಳಿಸಿ ಪ್ರತಿ ವರ್ಷ 100% ಉತ್ತಮ ಶ್ರೇಯಾಂಕದ ಫಲಿತಾಂಶ ಪಡೆಯುತ್ತಿದೆ.

ಈ ವರ್ಷ ಜೂನ್ 1999ರಲ್ಲಿ ನಡೆದ ಪರೀಕ್ಷೆಗಳಿಗೆ 4 ಅಭ್ಯರ್ಥಿಗಳನ್ನು ಕಳಿಸಿದ್ದು ಎಲ್ಲರೂ ಉತ್ತಮ ಶ್ರೇಯಾಂಕದೊಂದಿಗೆ ತೇರ್ಗಡೆಯಾಗಿದ್ದಾರೆ.

| | | |
|---|---|---|
| ಅನುರಾಧ ಶರ್ಮ | ವಿದ್ವತ್‌ಪದವಿ | ಪ್ರಥಮ ದರ್ಜೆ |
| ಶ್ಯಾಮಲ | ವಿದ್ವತ್ ಪದವಿ | ದ್ವಿತೀಯ ದರ್ಜೆ |
| ರಸಿಕಾಭಿದ್ಧೆ | ಹಿಂದೂಸ್ತಾನೀ | ಪ್ರಥಮ ದರ್ಜೆ (Distinction) 95% |
| ರಾಮಮೋಹನ್ | ಮೃದಂಗ | ತೃತೀಯ ದರ್ಜೆ |

ಕರ್ನಾಟಕ ಸಂಗೀತ ಪರೀಕ್ಷೆಗಳಲ್ಲಿ ವಿದ್ವತ್ ಪದವಿ ಪರೀಕ್ಷೆಯು ಉಚ್ಚ ಮಟ್ಟದ ಅಂತಿಮ ಪರೀಕ್ಷೆಯಾಗಿದ್ದು ಇಬ್ಬರೂ ಅಭ್ಯರ್ಥಿಗಳು ವಿದ್ವತ್ ಪದವಿ ಪಡೆದಿರುವುದು ಮುಂಬಯಿಯಲ್ಲಿ ಪ್ರಥಮವಾಗಿದ್ದು ಮೈಸೂರು ಸಂಗೀತ ವಿದ್ಯಾಲಯದ ವೈಶಿಷ್ಟ್ಯತೆಯನ್ನು ಹೆಚ್ಚಿಸಿದೆ.

### ಚೆನ್ನೈನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಮುಂದಿನ ಡಿಸೆಂಬರ್ 25 ಮತ್ತು 26ರಂದು ಚೆನ್ನೈನಲ್ಲಿ ಏಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ.

`ದೆಹಲಿ ಕನ್ನಡಿಗ' ಪತ್ರಿಕೆ ಆಶ್ರಯದಲ್ಲಿ ನಡೆಯಲಿರುವ ಈ ಸಮ್ಮೇಳನದಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಭಾರತದಾದ್ಯಂತದಿಂದ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಎರಡು ಸಾವಿರ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆಂದು ಸಾಮಗ ತಿಳಿಸಿದ್ದಾರೆ.

### ದೆಹಲಿಯಲ್ಲಿ ಟಿಪ್ಪು ದ್ವಿಶತಮಾನೋತ್ಸವ ನಾಡಪ್ರೇಮ ರಕ್ಷಣೆಗೆ ಕರೆ

ತನ್ನ ನಾಡಿನ ರಕ್ಷಣೆಗೆ ಬ್ರಿಟಿಷರ ವಿರುದ್ಧ ಹೋರಾಡಿ ಮಡಿದ ಮೈಸೂರಿನ ಹುಲಿ ಎಂದೇ ಖ್ಯಾತನಾದ ಟಿಪ್ಪು ಸುಲ್ತಾನನ ಆದರ್ಶವನ್ನನುಸರಿಸಿ ಕನ್ನಡಿಗರು ವಿದೇಶ ಸಂಸ್ಕೃತಿಯ ವ್ಯಾಮೋಹಕ್ಕೊಳಗಾಗದೆ ತಮ್ಮ ನಾಡು, ನುಡಿ, ಸಂಸ್ಕೃತಿಯ ರಕ್ಷಣೆ ಮಾಡಬೇಕೆಂದು ಬಾ. ಸಾಮಗ ಅವರು ಕರೆ ನೀಡಿದ್ದಾರೆ. ದೆಹಲಿಯಲ್ಲಿ ಜುಲೈ 18ರಂದು ನಡೆದ ಟಿಪ್ಪು ಸುಲ್ತಾನ್ ಮರಣದ

Regn. No. 040015/86
Regn. No. MH/by/NE121/99
Date of Posting : 10-9-99



ದ್ವಿಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಬಾ. ಸಾಮಗ ಅವರು ಮಾತನಾಡಿದರು.

ಇಂಗ್ಲಿಷರನ್ನು ಭಾರತಿಂದ ಓಡಿಸುವುದೇ ಪರಮ ಧ್ಯೇಯವಾಗಿರಿಸಿಕೊಂಡ ಟಿಪ್ಪುವಿಗೆ ರಾಷ್ಟ್ರ ಮಟ್ಟದಲ್ಲಿ ಸ್ಮಾರಕ ಸ್ಥಾಪಿಸುವುದು ಅಗತ್ಯವೆಂದ ಸಾಮಗ ಅವರು ದೆಹಲಿಯಲ್ಲಿ ಟಿಪ್ಪುವಿನ ಪ್ರತಿಮೆ ಪ್ರತಿಷ್ಠಾಪಿಸಬೇಕೆಂದರಲ್ಲದೆ ಕೇಂದ್ರ ಸರ್ಕಾರ ಮೈಸೂರು ದಿಲ್ಲಿ ನಡುವೆ ಪ್ರತಿನಿತ್ಯ ಎಕ್ಸ್‌ಪ್ರೆಸ್ ರೈಲು ಓಡಿಸಿ ಅದಕ್ಕೆ ಟಿಪ್ಪುವಿನ ನಾಮಕರಣ ಮಾಡಬೇಕೆಂದು ಆಗ್ರಹಪಡಿಸಿದರು. ಕರ್ನಾಟಕ ಸರ್ಕಾರ ದಿಲ್ಲಿಯಲ್ಲಿ ಟಿಪ್ಪು ಸ್ಮಾರಕ ಕರ್ನಾಟಕದ ಐತಿಹಾಸಿಕ ಸಾಂಸ್ಕೃತಿಕ ಸಂಗ್ರಹಾಲಯ ಸ್ಥಾಪಿಸಬೇಕೆಂದು ಸಾಮಗ ಅವರು ರಾಷ್ಟ್ರಮಟ್ಟದಲ್ಲಿ ಟಿಪ್ಪು ಸ್ಮಾರಕ ಉತ್ಸವ ನಡೆಸಿ ನಾಡಪ್ರೇಮ ರಕ್ಷಣಾ ಜಾಗೃತಿ ಮೂಡಿಸಬೇಕೆಂದರು.

### 'ಅಮೂಲ್ಯ' ಕಥಾ ಸ್ಪರ್ಧೆ

ಮುಂಬಯಿ : ಮುಂಬಯಿ ಕುಲಾಲ ಸಂಘವು ಪ್ರಕಟಣೆ ಮಾಡುತ್ತಿರುವ 'ಅಮೂಲ್ಯ' ತ್ರೈಮಾಸಿಕ ಸಂಚಿಕೆಯು ಪ್ರಥಮ ಹುಟ್ಟುಹಬ್ಬದ ಸವಿನೆನಪಿಗಾಗಿ ಕಥಾ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ ಎಂದು ಸಂಪಾದಕರು ತಿಳಿಸಿದ್ದಾರೆ.

ಕೃತಿಗಳು ಸ್ವಂತದ್ದಾಗಿದ್ದು ಬೇರೆಲ್ಲೂ ಪ್ರಕಟಗೊಂಡಿರಬಾರದು. ಫುಲ್‌ಸ್ಕೇಪ್ ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರಬೇಕು. ಲೇಖಕರ ವಿಳಾಸ ಹಾಗೂ ಭಾವಚಿತ್ರವನ್ನು ಪ್ರತ್ಯೇಕವಾಗಿ ಲಗತ್ತೀಕರಿಸಬೇಕು. ಕೃತಿಗಳನ್ನು ಹಿಂದೆ ಕಳುಹಿಸಲಾಗುವುದಿಲ್ಲ. ಪ್ರಥಮ ಹಾಗೂ ದ್ವಿತೀಯ ಬಹುಮಾನ ನೀಡಲಾಗುವುದಲ್ಲದೆ, ಉತ್ತಮವೆಂದು ಪರಿಗಣಿಸಲಾದ ಕಥೆಗಳನ್ನು 'ಅಮೂಲ್ಯ'ದ ಮುಂದಿನ ಸಂಚಿಕೆಗಳಲ್ಲಿ ಹಂತ ಹಂತವಾಗಿ ಪ್ರಕಟಿಸಲಾಗುವುದು. ಸಂಪಾದಕ ಮಂಡಳಿ ನಿಗದಿಪಡಿಸಿದ ಗೌರವ ಧನವನ್ನು ಲೇಖಕರಿಗೆ ಕಳುಹಿಸಿ ಕೊಡಲಾಗುವುದು. ಕೃತಿಗಳು ದಿನಾಂಕ **10-10-1999**ರ ಒಳಗೆ 'ಅಮೂಲ್ಯ'ದ ಈ ಕೆಳಗಿನ ವಿಳಾಸಕ್ಕೆ ತಲುಪಬೇಕು ಎಂದು ತಿಳಿಸಲಾಗಿದೆ.

The Editor.
**'Amoolya' (Competition)**
Kulala Sudharaka Sangha,
Mapla House,
4th Floor, 91 Modi Street,
Fort, Mumbai-400 001.

**Forth coming Events**

## GIRISH KARNAD NATAKOTSAVA

In the year of Gynana Peeth award being conferred on Girish Karnad, as a tribute to the artist, a festival of his play is being organised at Mumbai by The Mysore Association, and Kannada Kala Kendra, in association with Natyasangha Theatre Centre of Bangalore.

The Natakotsava is being held at the Mysore Association's Auditorium from 27th Nov. to 4th Dec. 99. In all 8 plays of Girish Karnad will be staged out of which 5 plays will be in Kannada and rest will be in Hindi, Marathi and English. On the concluding day, there will be a seminar in which eminent theatre & literary personalities will participate and Girish Karnad will interact with the participants in the open house trust will follow the seminar.

All the plays are being presented by well known theatre groups.

The 5 Kannada plays are from Karnataka, Whole the hindi play is from Sholapur, Marathi play from Pune and the English play from Mumbai. In order to cater to wider section of theatre lovers, the Kannada plays are being staged in the suburbs also, with the active participation and support of local Kannada Sanghas Detailed Programme of the festival will be announced shortly.

**A Festival of Children plays**

Kannada Kala Kendra, Mumbai is organising a festival of Children's plays at the Mysore Associations Auditorium. on the 13th & 14th November 1999. In all six plays will be presented in this festival in the following organisations :

The Mysore Association
BSKB Association
NKES School, Wadala
Karnataka Sangha, Goregaon
Kannada Sangha, Navi Mumbai
Municipal Kannada School

A detailed programme will be announced subsequently.

## OBITUARY

### C. E. BHASKARA RAO

Nesaru requests to inform the readers that Sri C.E. Bhaskar Rao, one of our senior life members passed away recently

Born and educated in Bangalore, he graduated in Electrical Engineering from College of Engineering, Bangalore. After brief stints at Hindustan Aircraft Ltd. and the Electrical Department, Government of Mysore, joined Kirloskar Bros. Ltd., Kirloskarwadi where he was involved in the design and manufacture of electric motors.

Moving on to Bharat Bijlee Ltd., in 1948, he developed designs of special purpose motors and for the first time in the country, flame proof motors, After training for about two years at Siemens, West Germany he was engaged in the design and production of electric motors in development of advanced design of a wide range of electric motors. After retirement as Chief Engineer he served the company as consultant for a few years. Thereafter, he was active as consultant almost till his demise.

He pioneered in the formulation of Indian standards for electrical motors in the initial years and in this context, served on several important committees of the Indian Standards Institution (Now Bureau of Indian Standards)

He was an active member of the Institution of Engineers, Indian Electrical and Electronics Manufacturers Association and Institute of Standards Engineers.

A keen sportsman and an active cricket and hockey player in his collegiate years, he qualified as a hockey umpire and officiated as one in the Aga Khan Hockey Tournament, Mumbai in his active years.

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38